## ಆರ್ಬಿಟ್,ಹುಮನಾಬಾದ

ಸಮಾಜ ಸೇವಾ ಸಂಸ್ಥೆ, NH 65 ರೈಲ್ವೇ ನಿಲ್ದಾಣದ ಹತ್ತಿರ
ಹುಮ್ನಾಬಾದ ತಾಲೂಕು, ಬೀದರ್ ಜಿಲ್ಲೆ, ಕರ್ನಾಟಕ, 585330

## ಸೇವಾ ಸಂಗಮ ಸಂಸ್ಥೆ, ಕಲಬುರಗಿ

ಸಮಾಜ ಸೇವಾ ಸಂಸ್ಥೆ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ ಕೇಂದ್ರೀಯ ವಿದ್ಯಾಲಯ
ಹತ್ತಿರ, ಕೋಟ್ನೂರ (ಡಿ) ಜೇವರ್ಗಿ ರಸ್ತೆ ಕಲಬುರಗಿ 585102


# ಸೇವಾವಾಣಿ


ಏಪ್ರಿಲ್ / April 2025






ಪೂಜ್ಯ. ಡಾ॥ ರಾಬರ್ಟ್ ಮೈಕಲ್ ಮಿರಂದಾ
ಧರ್ಮಾಧ್ಯಕ್ಷರು, ಗುಲ್ಬರ್ಗಾ ಧರ್ಮಕ್ಷೇತ್ರ

ವಂ. ಫಾ॥ ವಿಕ್ಟರ್ ವಾಸ್ ನಿರ್ದೇಶಕರು,
ಆರ್ಬಿಟ್ ಮತ್ತು ಸೇವಾ ಸಂಗಮ ಸಂಸ್ಥೆ, ಗುಲ್ಬರ್ಗಾ

## “ವಿಶ್ವ ಮಹಿಳಾ ದಿನಾಚರಣೆ” “ಉಚಿತ ಆರೋಗ್ಯ ಮತ್ತು ಕ್ಯಾನ್ಸರ್ ತಪಾಸಣೆ ಸಿಬಿರ ಕಾರ್ಯಕ್ರಮ”

ದಿನಾಂಕ 18 ಮಾರ್ಚ್ 2025 ರಂದು ಆರ್ಬಿಟ್ ಸಂಸ್ಥೆಯಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಮಹಿಳಾ ಜನಶಕ್ತಿ ತಾಲೂಕ ಒಕ್ಕೂಟದ ಜಂಟಿ ಸಯೋಗದಲ್ಲಿ ಮಹಿಳಾ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಬೆಥನಿ ಕಾನ್ವೆಂಟ್ ಶಾಲೆಯ ಮುಖ್ಯಸ್ಥರಾದ ಸಿಸ್ಟರ್ ಲಿರಾ ರವರು ಒಬ್ಬ ಯಶಸ್ವಿ ಪುರುಷನ ಹಿಂದೆ ಮಹಿಳೆಯ ತ್ಯಾಗವನ್ನು ಮತ್ತು ತಮ್ಮದೆಯಾದ ಶ್ರಮವಹಿಸುತ್ತದೆ. ಇಂದಿನ ಮಹಿಳೆಯರು ಹಳೆಯ ಸಂಪ್ರದಾಯಗಳನ್ನು ಬದಿಗೊತ್ತಿ ಉತ್ತಮ ಶಿಕ್ಷಣ ಪಡೆಯುವುದರೊಂದಿಗೆ ಸಮಾಜದ ಮುಖ್ಯ ವಾಹಿನಿಗೆ ಬರುತ್ತಿರುವುದು ತುಂಬಾ ಸಂತೋಷದ ವಿಚಾರ. 30 ವರ್ಷಗಳಿಂದ ಆರ್ಬಿಟ್ ಸಂಸ್ಥೆಯು ಮಹಿಳೆಯರ ಸಬಲೀಕರಣಕ್ಕಾಗಿ ಶ್ರಮಿಸುತ್ತಿದೆ. ಆರ್ಬಿಟ್ ಸಂಸ್ಥೆಯ ಅಧ್ಯಕ್ಷರು, ನಿರ್ದೇಶಕರು ಹಾಗೂ ಎಲ್ಲಾ ಸಮಾಜ ಸೇವಾ ಕಾರ್ಯಕರ್ತರ ಶ್ರಮ ಇದರಲ್ಲಿ ಅಡಕವಾಗಿದೆ ಎಂದು ನುಡಿದರು. ಗುಲ್ಬರ್ಗ ಪ್ರಾಂತದ ಧರ್ಮಾಧ್ಯಕ್ಷರಾದ ವಂದನೀಯ ಫಾದರ್ ಮೈಕಲ್ ಮಿರಂದ ರವರು ವಹಿಸಿಕೊಂಡು ತಮ್ಮ ಅಮೃತವಾಣಿಯನ್ನು ನುಡಿದರು. ಈ ಸಂದರ್ಭದಲ್ಲಿ ತಾಲೂಕು ಪಂಚಾಯಿತಿಯ ಕಾರ್ಯನಿರ್ವಾಣ ಅಧಿಕಾರಿಗಳಾದ ಶ್ರೀಮತಿ ದೀಪಿಕಾ ನಾಯ್ಕರ್, ಸಂಚಾರಿ ಪೊಲೀಸ್ ಠಾಣೆಯ ಸಬ್ ಇನ್ಸೆಕ್ಟರ್ ಶ್ರೀಮತಿ ಸವಿತಾ ಪ್ರಿಯಾಂಕ, ಶ್ರೀಮತಿ ವಿದ್ಯಾ ಭೀಮರಾವ್ ಪಾಟೀಲ್, ಶ್ರೀಮತಿ ರೇಖಾ ಸುನಿಲ್ ಪಾಟೀಲ್, ಆರ್ಬಿಟ್ ಸಂಸ್ಥೆಯ ನಿರ್ದೇಶಕರಾದ ವಂದನೀಯ ಫಾದರ್ ವಿಕ್ಟರ್ ವಾಸ್, ಗಾಂಧಿನಗರ ಕೇಂದ್ರದ ನಿರ್ದೇಶಕರಾದ ಫಾದರ್ ಜಾರ್ಜ್, ಸಿಸ್ಟರ್ ಕ್ರಿಸ್ಟಿನ, ಶೀಲಾ, ಇಂಡಿಯನ್ ಕ್ಯಾನ್ಸರ್ ಸೊಸೈಟಿಯಿಂದ ಡಾ. ಗುರುರಾಜ್ ಕುಲಕರ್ಣಿ ಉಪಸ್ಥಿತರಿದ್ದರು. ಶಾಲೆಯ ಮಕ್ಕಳು ಹಾಗೂ ಮಹಿಳೆಯರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ವಿಶೇಷವಾಗಿ ಮಹಿಳೆಯರಲ್ಲಿ ಕಂಡುಬರುವ ಸ್ತನ ಕ್ಯಾನ್ಸರ್ ಹಾಗೂ ಗರ್ಭಕೋಶ ಕ್ಯಾನ್ಸರ್‌ನ ಉಚಿತ ತಪಾಸಣಾ ಶಿಬಿರವನ್ನು ಮಾಡಲಾಯಿತು. ಯಶಸ್ಸು ಕಂಡ ಮಹಿಳೆಯರು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು. ಗಣ್ಯರಿಂದ ಸಾಧಕ ಮಹಿಳೆಯರಿಗೆ ಸನ್ಮಾನಿಸಲಾಯಿತು. ಗಾಂಧಿನಗರ ಶಾಲೆಯ ಮಕ್ಕಳು ಪ್ರಾರ್ಥಿಸಿದರು. ಶ್ರೀಮತಿ ಜಾನಕಿ ಹುಡುಗಿ ಸ್ವಾಗತಿಸಿದರು. ಶ್ರೀಮತಿ ರಾಣಿ ಸವಿಧಾನ ಪೀಠಿಕೆ ಓದಿದರು. ಶ್ರೀಮತಿ ರಬೇಕಾ ನಿರೂಪಿಸಿದರು ಶ್ರೀಮತಿ ಸವಿತಾ ನಿರ್ಗ ವಂದಿಸಿದರು. ಈ ಕಾರ್ಯಕ್ರಮದಲ್ಲಿ ಸುಮಾರು 250 ಸ್ವ-ಸಹಾಯ ಸಂಘದ ಮಹಿಳೆಯರು ಭಾಗವಹಿಸಿದರು. 67 ಮಹಿಳೆಯರಿ ಉಚಿತ ಆರೋಗ್ಯ ತಪಾಸಣೆ ಹಾಗೂ ಉಚಿತ ಕಣ್ಣಿನ ತಪಾಸಣೆ ಮಾಡಿಸಿಕೊಂಡಿದರು.











@Orbitbidar | @orbithumnabad

@Sevasangama Kalaburagi @sevasangama01 www.sevasangama.in 897 111 9914

# "ನವಜೀವನ (ಎ.ಪಿ.ಏಫ್) ಕಾರ್ಯಕ್ರಮ"

## "ಸ್ವ-ಸಹಾಯ ಸಂಘದ ಮಹಿಳೆಯರಿಗೆ ಮಾನಸಿಕ ಆರೋಗ್ಯದ



ಮಾರ್ಚ್ 19 2025ರಂದು ಚಿಟಗುಪ್ಪ ತಾಲೂಕಿನ ವಡ್ಡನಕೆರೆ ಗ್ರಾಮದ ಮಹಿಳಾ ಸ್ವ-ಸಹಾಯ ಸಂಘದ ಮಹಿಳೆಯರಿಗೆ ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ಮತ್ತು ಅಜೀಮ್ ಪ್ರೇಮ್ ಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಕಾರ್ಯಕ್ರಮ ನಡೆಸಲಾಯಿತು. ಈ ಕಾರ್ಯಕ್ರಮಕ್ಕೆ ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಸಂಯೋಜಕರಾದ ಶ್ರೀ ಪ್ರವೀಣ್ ಕುಮಾರ್ ಅವರು ಮಹಿಳೆಯರಿಗೆ ಮಾಹಿತಿ ನೀಡುತ್ತಾ, ಮಾನಸಿಕ ಕಾಯಿಲೆ ಒಂದು ಮೆದುಳಿನ ಕಾಯಿಲೆಯಾಗಿದೆ ಈ ಕಾಯಿಲೆಯು ಇತರ ಕಾಯಿಲೆಗಳಲ್ಲಿ ಒಂದು ಸಾಮಾನ್ಯ ಕಾಯಿಲೆಯಾಗಿದೆ ಎಂದು ತಿಳಿಸಿದರು. ಮತ್ತು ಮಾನಸಿಕ ಕಾಯಿಲೆ ಲಕ್ಷಣಗಳು ಅದು ಹೇಗೆ ಬರುತ್ತದೆ ಎಂದು ಸಂಪೂರ್ಣ ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 20 ಮಹಿಳೆಯರು ಭಾಗವಹಿಸಿದರು.

ವರದಿಗಾರರು: ಅರುಣಕುಮರ ಎಸ್

## "ಮಾನಸಿಕ ಅಸ್ವಸ್ಥರ ಬಗ್ಗೆ ಮಾಹಿತಿ ಸರ್ಕಾರದಿಂದ ಸಿಗುವ ಉಚಿತ ಔಷಧಿ ಬಗ್ಗೆ ಮಾಹಿತಿ"



08 ಮಾರ್ಚ 2025ರಂದು ಹುಮ್ನಾಬಾದ್ ತಾಲೂಕಿನ ಮಾಣಿಕನಗರ್ ಗ್ರಾಮದಲ್ಲಿ ನಡೆಯುತ್ತಿರುವ ಉದ್ಯೋಗ ಖಾತ್ರಿಯಲ್ಲಿ ಕೆಲಸ ಮಾಡುವವರಿಗೆ ಮಾನಸಿಕ ಅಸ್ವಸ್ಥರ ಬಗ್ಗೆ ಮಾಹಿತಿ ನೀಡಲಾಯಿತು. ಮತ್ತು ಅವರಿಗೆ ಸರ್ಕಾರದಿಂದ ಸಿಗುವ ಉಚಿತ ಔಷಧಿ ಬಗ್ಗೆ ಮಾಹಿತಿ ತಿಳಿಸಲಾಯಿತು, ಅಜೀಮ್ ಪ್ರೇಮ್ ಜಿ ಇವರ ಸಂಯುಕ್ತ ಆಶ್ರಯದ ಆರ್ಬಿಟ್ ಸಂಸ್ಥ ನವಜೀವನ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಮಹಾದೇವಿ ಇವರು ಮಾನಸಿಕ ಕಾಯಿಲೆ ಬಗ್ಗೆ ಮಾತನಾಡಿದರು. ಮಾನಸಿಕ ಕಾಯಿಲೆ ಒಂದು ಮೆದುಳಿನ ಕಾಯಿಲೆಯಾಗಿದೆ ಮತ್ತು ಅದರ ಲಕ್ಷಣಗಳು ಬಗ್ಗೆ ಮಾಹಿತಿ ತಿಳಿಸಿದರು ಕಾಯಿಲೆಯಿಂದ ಬಳಲುತ್ತಿರುವ ವ್ಯಕ್ತಿಯ ಲಕ್ಷಣಗಳು, ಕಾರಣ ಇಲ್ಲದೆ ಅಳೋದು, ಕಾರಣ ಇಲ್ಲದೆ ನಗುವುದು, ದಾರಿಯಲ್ಲಿ ಹೋಗುವವರನ್ನು ಕಂಡು ಬಯ್ಯೋದು, ಪದೇ ಪದೇ ಕೈ ತೊಳೆಯುವುದು, ಏಕಾಂಗಿ ಆಗಿರೋದು ಹೀಗೆ ಅವರ ಲಕ್ಷಣಗಳು ಇರುತ್ತವೆ. ಹಿಂತಾ ಲಕ್ಷಣಉಳ್ಳ ವ್ಯಕ್ತಿಗಳನ್ನು ಕಂಡಿದ್ದರೆ ಹುಮ್ನಾಬಾದ್ ತಾಲೂಕಿನ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರತಿ ಬುಧವಾರ ಡಾಕ್ಟರ್ ಬರುತ್ತಾರೆ ಅವರನ್ನು ತಪಾಸಣೆ ಮಾಡಿ ಅವರಿಗೆ ಉಚಿತ ಔಷಧಿಯನ್ನು ಕೊಡುತ್ತಾರೆ. ಬೆಳಗ್ಗೆ 10 ಗಂಟೆಯಿಂದ ಮಧ್ಯಾ 1:00 ಗಂಟೆಯವರೆಗೆ ಇರುತ್ತಾರೆ ಎಂದು ತಿಳಿಸಲಾಯಿತು. ವರದಿಗಾರರು: ಮಹಾದೇವಿ

## "ಸ್ವ-ಸಹಾಯ ಸಂಘದ ಮಹಿಳೆಯರಿಗೆ ಮಾನಸಿಕ ಆರೋಗ್ಯದ



06 ಮಾರ್ಚ್ 2025ರಂದು ಹುಮ್ನಾಬಾದ್ ತಾಲೂಕಿನ ಸೀತಾಳಗೆರಾ ಗ್ರಾಮದಲ್ಲಿರುವ ಮಾನಸಿಕ ಅಸ್ವಸ್ಥರ ಜಾಗತಿ ಅರಿವು ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ. ಡೇವಿಡ್ ಅವರು ಮಾನಸಿಕ ಕಾಯಿಲೆಯು ಇತರ ರೋಗಗಳಂತೆ ಗುಣಪಡಿಸುವಂತ ಕಾಯಿಲೆಯಾಗಿದೆ, ಸಮಯಕ್ಕೆ ಸರಿಯಾಗಿ ಚಿಕಿತ್ಸೆ ಪಡೆಯುವುದರ ಮೂಲಕ ಇವರು ಗುಣಮುಖರಾಗುತ್ತಾರೆ ಎಂದು ಸಮುದಾಯದ ಮಹಿಳೆಯರಿಗೆ ಮಾಹಿತಿ ನೀಡಲಾಯಿತು. ಮಾಹಿತಿಯನ್ನು ಪಡೆದ ಮಹಿಳೆಯರು ಇತರರಿಗೂ ನಮ್ಮ ಸಮುದಾಯದಲ್ಲಿ ಇರುವ ಜನರಿಗೆ ಇದರ ಕುರಿತು ಮಾಹಿತಿ ನೀಡುತ್ತೇವೆ. ಹಾಗೂ ಚಿಕಿತ್ಸೆ ಕುಡಿಸುವಲ್ಲಿ ನಾವು ಸಹ ಭಾಗವಹಿಸುತ್ತೇವೆ. ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಡಿ.ಎಂ.ಎಚ್.ಪಿ ಕ್ಯಾಂಪ್‌ಗಳನ್ನು ಉಚಿತವಾಗಿ ಪಡೆಯಲು ತಿಳಿಸಿದರು. ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಿಗೂ ಸಂಯೋಜಕರಿಗೂ, ನಿರ್ದೇಶಕರಿಗೂ ತುಂಬು ಹೃದಯದ ಧನ್ಯವಾದಗಳು ವ್ಯಕ್ತಪಡಿಸಿದರು. ವರದಿಗಾರರು: ಡೇವಿಡ್

## "ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮ"



07 ಮಾರ್ಚ್ 2025 ರಂದು ಹುಮನಾಬಾದ್ ತಾಲೂಕಿನ ಸುಲ್ತಾನಬಾದ್‌ವಾಡಿ ಗ್ರಾಮದ ಮಹಿಳೆಯರಿಗೆ ಆರ್ಬಿಟ್ ಸಂಸ್ಥೆ ಹುಮನಾಬಾದ್ ಹಾಗೂ ಅಜೀಮ್ ಪ್ರೇಮ್ ಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮಕ್ಕೆ ನವಜೀವನ ಕಾರ್ಯಕ್ರಮದ ಕಾರ್ಯಕರ್ತೆಯದ ಶ್ರೀಮತಿ ಪೂಜಾ ಅವರು ಕಾರ್ಯಕ್ರಮ ಉದ್ದೇಶಿಸಿ ಮಾತನಾಡುತ್ತಾ. ಮಾನಸಿಕ ಎಂದರೇನು. ಮಾನಸಿಕ ಕಾಯಿಲೆ ಎಂದರೇನು, ಅದರ ಲಕ್ಷಣಗಳ ಕುರಿತು ಮಾಹಿತಿ ನೀಡಿದರು. ಮಾನಸಿಕ ಕಾಯಿಲೆ ಬಂದರೆ ಭಯಪಡುವ ಅವಶ್ಯಕತೆ ಇಲ್ಲ ಯಾಕೆಂದರೆ ಇತರ ಕಾಯಿಲೆಗಳಂತೆ ಇದು ಕೂಡ ಒಂದುಮೆದುಳಿನ ಕಾಯಿಲೆಯಾಗಿದೆ. ಇದಕ್ಕೆ ಸೂಕ್ತ ಚಿಕಿತ್ಸೆ ಕೊಡಿಸುವುದರ ಮೂಲಕ ಕಾಯಿಲೆ ಗುಣಪಡಿಸಬಹುದು ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 13 ಜನ ಮಹಿಳೆಯರು ಕಾರ್ಯಕ್ರಮದ ಸದುಪಯೋಗವನ್ನು ಪಡೆದುಕೊಂಡರು. ವರದಿಗಾರರು: ಪೂಜಾ

## "ಒಲಸೆ ಬಂದ ಪೋಷಕರಿಗೆ ಆರ್ಬಿಟ್ ಸಂಸ್ಥೆಯ



ಕಳೆದ 20 ವರ್ಷಗಳಿಂದ ಬಸವಕಲ್ಯಾಣದಿಂದ ವಲಸೆ ಬಂದ ಮಾನಸಿಕ ಅಸ್ವಸ್ಥನ ಪೋಷಕರಾದ ಸರಸ್ವತಿ ಗಂಡ ಬಾಬುರಾವ್ ದಂಪತಿಗಳು ಹುಮ್ನಾಬಾದ್ ತಾಲೂಕಿನ ಇಂದಿರಾನಗರ ಗ್ರಾಮದ ನಿವಾಸಿಗಳಾಗಿದ್ದು. ಇವರು ತಮ್ಮ ಮೂಲ ದಾಖಲೆಗಳು ಇಲ್ಲದೆ ಇರುವ ಕಾರಣ ಹಲವಾರು ಸಮಸ್ಯೆಗಳನ್ನು ಕಷ್ಟಗಳನ್ನು ಅನುಭವಿಸಿದ್ದರು. ಇವರ ಸಮಸ್ಯೆಗಳನ್ನು ಕಂಡ ಆರ್ಬಿಟ್ ಸಂಸ್ಥೆಯು ಇವರಿಗೆ ಮೂಲ ದಾಖಲೆಗಳಾದ ವಾಸಸ್ಥಳ ಪ್ರಮಾಣ ಪತ್ರ, ಆಧಾರ್ ಕಾರ್ಡ್, ಐಡೆಂಟಿ ಕಾರ್ಡ್ ಮಾಡಿಸಿದ್ದು, ಸದ್ಯಕ್ಕೆ ವೋಟರ್ ಐಡಿ ಕಾರ್ಡ್, ಹೆಲ್ತ್ ಕಾರ್ಡ್ ಮಾಡಿಸಿಕೊಳ್ಳಲು ಮಾರ್ಗದರ್ಶನವನ್ನು ನೀಡಿರುವ ಪ್ರಯುಕ್ತ ಅಪ್ಲಿಕೇಶನ್ ಹಾಕಿಸಲಾಗಿದೆ. ಆರ್ಬಿಟ್ ಸಂಸ್ಥೆಗೆ ಸಹಾಯದಿಂದ ನಮ್ಮ ಜೀವನದಲ್ಲಿ ಒಂದು ಆಶಾ ಕಿರಣ ಕಂಡು ಸಮಸ್ಯೆಯಲ್ಲಿರುವಂತಹ ಜನಗಳನ್ನು ಸಹಾಯವನ್ನು ಮಾಡಲು ಮುಂದಾಗಿದ್ದಾರೆ. ಎಂಬುದನ್ನು ತಿಳಿದು ಆರ್ಬಿಟ್ ಸಂಸ್ಥೆಗೆ ಧನ್ಯವಾದಗಳು ವ್ಯಕ್ತಪಡಿಸಿದ್ದಾರೆ. ವರದಿಗಾರರು: ಪ್ರೀತಿ



# "ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ"

## "ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳನ್ನು ಫರಿಪಾಲಿಸುವ ಪೋಷಕರಿಗೆ ತರಬೇತಿ"



ಮಾರ್ಚ್ 3 2025ರಂದು ಹುಮ್ನಾಬಾದ್ ತಾಲೂಕಿನ ಹಳ್ಳಿಖೇಡ (ಬಿ) ಉಪ ಕೇಂದ್ರದಲ್ಲಿ, ಆರ್ಬಿಟ್ ಸಂಸ್ಥೆಯ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಮಮತಾ ರವರು ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳಲ್ಲಿ ಕಂಡುಬರುವ ಪ್ರಮುಖವಾದ ಸಮಸ್ಯೆಗಳ ಬಗ್ಗೆ ತಿಳಿಸಿದರು. ದೃಷ್ಟಿ ಗ್ರಹಕ್ಕೆ, ಗಾತ್ರ, ಆಕಾರ, ಸಂಖ್ಯೆಗಳ ಪರಿಕಲ್ಪನೆ, ಮಾತಿನ ಬೆಳವಣಿಗೆ, ದೈಹಿಕ ಬೆಳವಣಿಗೆ, ಭೌತಿಕ ಬೆಳವಣಿಗೆ, ಹೀಗೆ ಮಕ್ಕಳಲ್ಲಿ ಹಲವಾರು ಸಮಸ್ಯೆಗಳನ್ನು ನೋಡಬಹುದಾಗುತ್ತದೆ. ನಮ್ಮ ಮಕ್ಕಳು ಸ್ವತಂತ್ರವಾಗಿ ದಿನನಿತ್ಯ ಚಟುವಟಿಕೆ ಮಾಡದೆ ಇದ್ದ ಸಂದರ್ಭದಲ್ಲಿ ಆರ್ಬಿಟ್ ಸಂಸ್ಥೆಗೆ ತಿಳಿಸುವುದು. ನಾವು ಮೌಲ್ಯಮಾಪನದ ಮುಖಾಂತರ ಮಕ್ಕಳ ಚಟುವಟಿಕೆಗಳನ್ನು ಹೇಳಿಕೊಡುತ್ತೇವೆ. ಎಂದು ತಿಳಿಸಲಾಯಿತು. ಈ ಕಾರ್ಯಕ್ರಮದಲ್ಲಿ ಸಮುದಾಯದ ಒಟ್ಟು 22 ಜನರು ಇದರ ಸದುಪಯೋಗ ಪಡೆದುಕೊಂಡರು.

ವರದಿಗಾರರು: ಮಮತಾ

## "ಅಂಗನವಾಡಿ ಕೇಂದ್ರದಲ್ಲಿ ಬೆಳವಣಿಗೆಯಿಂದ ಕುಂಠಿತ ಹೊಂದಿರುವ ಮಕ್ಕಳನ್ನು ಪತ್ತೆ ಹಚ್ಚಲು ಬೇಬಿಸ್ಕ್ರೀನಿಂಗ್"





ಮಾರ್ಚ್ 25 2025ರಂದು ಬಸವಕಲ್ಯಾಣ ತಾಲೂಕಿನ ಹಣಮಂತವಾಡಿ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕಾರ್ಯಕರ್ತೆಯಾದ ಶ್ರೀಮತಿ ಕವಿತಾ ರವರು ಬೆಳವಣಿಗೆಯಿಂದ ಕುಂಠಿತ ಹೊಂದಿರುವ ಮಕ್ಕಳನ್ನು ಪತ್ತೆ ಹಚ್ಚಲು ಅಂಗನವಾಡಿ ಕೇಂದ್ರದಲ್ಲಿ ಮೊದಲು ಮಕ್ಕಳಿಗೆ ಬೇಬಿ ಸ್ಕ್ರೀನಿಂಗ್ ಮಾಡುವ ಮುಖಾಂತರ ಪತ್ತೆ ಹಚ್ಚಲು ಸಹಾಯ ವಾಗುತ್ತದೆ ಎಂದು ತಿಳಿಸಿದರು. ಅಂಗನವಾಡಿ ಕಾರ್ಯಕರ್ತರ ಸಹಾಯದಿಂದ 20 ಮಕ್ಕಳಿಗೆ ತೂಕ, ಎತ್ತರ, ತೋಳಿನ ಸುತ್ತಳತೆ, ತಲೆಯ ಸುತ್ತಳತೆ ಮಾಡಲಾಯಿತು. 3 ಮಕ್ಕಳಿಗೆ ಮೌಲ್ಯಮಾಪನ ಮಾಡಲಾಯಿತು. ಮೌಲ್ಯಮಾಪನ ಮಾಡುತ್ತಾ ಮಕ್ಕಳು ಯಾವ ವಿಕಲತೆಯಿಂದ ಇದ್ದಾರೆಂದು ತಿಳಿದುಕೊಂಡು ತಿಂಗಳಲ್ಲಿ ಎರಡು ಮೂರು ಸಲ ಮನೆ ಆಧಾರಿತ ಚಟುವಟಿಕೆ, ಅಂಗನವಾಡಿ ಕೇಂದ್ರದಲ್ಲಿ ಚಟುವಟಿಕೆಗಳನ್ನು ಮಾಡುವ ಮುಖಾಂತರ ಮಕ್ಕಳಲ್ಲಿ ಬದಲಾವಣೆ ತಂದಿದ್ದೇವೆ ಎಂದು ತಿಳಿಸಿದರು.

ವರದಿಗಾರರು: ಕವಿತಾ

## "ಮೂರು ದಿನಗಳ ಸಿಬ್ಬಂದಿ ಸಾಮರ್ಥ್ಯ ಬಲವರ್ಧನೆ ಕಾರ್ಯಕ್ರಮ"





19 ರಿಂದ 21 ರವರೆಗೆ ಮಾರ್ಚ್ 2025 ರಂದು ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಅಡಿಯಲ್ಲಿ ಮೂರು ದಿನಗಳ ಕಾಲ ಸಿಬ್ಬಂದಿ ಸಾಮರ್ಥ್ಯ ಬಲವರ್ಧನೆ ಕಾರ್ಯಕ್ರಮ ಬೆಂಗಳೂರಿನ ಎಪಿಡಿ ಸಂಸ್ಥೆಯ ಅಧಿನದಲ್ಲಿ ಬರುವಂತಹ ಏಳು ಅರೆ ಸರಕಾರಿ ಸಂಸ್ಥೆಗಳು ಭಾಗವಹಿಸಿದವು. ಈ ಕಾರ್ಯಕ್ರಮದಲ್ಲಿ ತಿಳಿಸಿದಂತಹ ವಿಷಯಗಳು ಮೊಟ್ಟಮೊದಲಿಗೆ ಬೆಳವಣಿಗೆಯಲ್ಲಿ ಕುಂಟಿತ ಹೊಂದಿರುವುದಕ್ಕೆ ಸಮಾನವಾಗಿರುವಂತಹ ಕಾರಣಗಳು ಕುರಿತು ಮಾಹಿತಿಯನ್ನು ಸಂಪನ್ಮೂಲಗಳ ವ್ಯಕ್ತಿಗಳು ಮಾಹಿತಿಯನ್ನು ನೀಡಿದರು. ಮಕ್ಕಳಲ್ಲಿ ಕಂಡು ಬರುವ ಮೋರ್ಛೆ ರೋಗ ಎಂದರೇನು? ಅದು ಹೇಗೆ ಬರುತ್ತದೆ ಅದರ ಪ್ರಮುಖ ವಿಧಗಳು ಯಾವ್ಯಾವು? ಅದರ ಚಿಕಿತ್ಸೆಯ ಕ್ರಮಗಳು ಯಾವ್ಯಾವು ಅನ್ನೋದರ ಕುರಿತು ಮಾಹಿತಿ ನೀಡಿದರು. ಮಕ್ಕಳಲ್ಲಿ ಕಂಡುಬರುವ ವಕ್ರ ಪಾದ ಮತ್ತು ಅದನ್ನ ಯಾವ ರೀತಿಯಾಗಿ ಚಿಕಿತ್ಸೆ ಮಾಡಿಸುವುದರ ಜೊತೆಗೆ ಸೀಳು ತುಟಿಯ ಶಸ್ತ್ರ ಚಿಕಿತ್ಸೆ ಕುರಿತು ತಿಳಿಸಿದರು. ಮಕ್ಕಳಲ್ಲಿ ಕಂಡು ಬರುವ ಕಲಿಕೆ ದೋಷಗಳ ಕುರಿತು ಮತ್ತು ಅದರ ವಿಧಗಳು ಕುರಿತು ಮಾಹಿತಿ ತಿಳಿಸಿದರು. ಮಕ್ಕಳ ಹೃದಯಕ್ಕೆ ಸಂಬಂಧಪಟ್ಟಂತಹ ಮತ್ತು ಸ್ವಾಶಕೋಶಗಳಿಗೆ ಸಂಬಂಧಪಟ್ಟಂತಹ ವಿಷಯಗಳು ಕುರಿತು ಹಾಗೂ ಅನುವಂಶತೆಯಿಂದ ಬರುವಂತಹ ಕಾಯಿಲೆಗಳ ಕುರಿತು ಮಾಹಿತಿಯನ್ನು ನೀಡಿದರು. ಈ ಒಂದು ಕಾರ್ಯಕ್ರಮದಲ್ಲಿ ಮೂರು ಜನ ಕಾರ್ಯಕರ್ತರು ಭಾಗವಹಿಸಿ ಮಾಹಿತಿ ತಿಳಿದುಕೊಳ್ಳಲಾಯಿತು. ವರದಿಗಾರರು: ಸೂರ್ಯಕಂತ್

# "ನವಜೀವನ (ಎಲ್.ಎಲ್.ಎಲ್.ಎಫ್) ಕಾರ್ಯಕ್ರಮ"

## "ಮಾನಸಿಕ ಅಸ್ವಸ್ಥತೆಗೆ ಒಳಗಾದ ವ್ಯಕ್ತಿಗಳ ಪಾಲಕ ಪೋಷಕರಿಗೆ ದೈನಂದಿನ ಚಟುವಟಿಕೆಗಳ ತರಬೇತಿ"



ಮಾರ್ಚ್ 18 2025ರಂದು ಕಮಾಲನಗರ ತಾಲೂಕಿನ ತೋರ್ಣವಾದಿ ಗ್ರಾಮದಲ್ಲಿ ದೈನಂದಿನ ಚಟುವಟಿಕೆಗಳ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದ ಉದ್ದೇಶ ಮಾನಸಿಕ ಅಸ್ವಸ್ಥತೆಗೆ ಒಳಗಾದ ವ್ಯಕ್ತಿಗಳ ಪಾಲಕ ಪೋಷಕರಿಗೆ ಯಾವ ರೀತಿಯ ನೋಡಿಕೊಳ್ಳಬೇಕು ಎಂಬುದರ ಬಗ್ಗೆ ಮಾಹಿತಿ ನೀಡಲಾಯಿತು. ಮಾನಸಿಕ್ ಅಸ್ವಸ್ಥತೆಗೆ ಒಳಗಾದ ವ್ಯಕ್ತಿಗಳನ್ನೂ ನಾವು ಪ್ರೀತಿ ವಿಶ್ವಾಸದಿಂದ ಅವರಿಗೆ ದಿನನಿತ್ಯದ ಕೆಲಸಗಳೆಂದರೆ ಬ್ರಷ್ ಮಾಡುವುದು, ಸ್ನಾನ ಮಾಡುವುದು, ತಲೆ ಬಾಚಿಕೊಳ್ಳುವುದು, ಊಟಮಾಡುವುದು ಮತ್ತು ಸರಿಯಾದ್ ಸಮಯಕ್ಕೆ ಮಾತ್ರೆಗಳನ್ನು ಸೇವಿಸುವುದು, ಹೀಗೆ ಅನೇಕ ರೀತಿಯ ಕೆಲಸಗಳನ್ನು ತಾನಾಗಿಯೇ ಮಾಡಿಕೊಳ್ಳುವಂತೆ ಪಾಲಕರು ಅವರಿಗೆ ತಿಳಿಸುವಂತೆ ಹೇಳಲಾಯಿತು. ಹೀಗೆ ಮಾಡುವುದರಿಂದ ಅವರು ಮಾನಸಿಕ ಕಾಯಿಲೆಯಿಂದ ಸ್ವಲ್ಪ ಸ್ವಲ್ಪ ಹೊರ ಬರುವಂತೆ ಪ್ರಯತ್ನಿಸುತ್ತಾರೆ. ಈ ಕಾರ್ಯಕ್ರಮದ ಉದ್ದೇಶ ಮಾನಸಿಕ ಹೊಂದಿದ ವ್ಯಕ್ತಿಗಳನ್ನು ತನ್ನ ಕೆಲಸವನ್ನು ತಾನಾಗಿಯೇ ಮಾಡಿಕೊಳ್ಳುವುದರಿಂದ ಅವರು ನನಗೆ ಕಾಯಿಲೆ ಇದೆ ಎಂಬುದನ್ನು ಮರೆತು ಹೋಗುತ್ತಾರೆ. ಹೀಗೆ ಮಾಡುವುದರಿಂದ ಅವರು ಮಾನಸಿಕ ಕಾಯಿಲೆ ಇಂದ ಸಂಪೂರ್ಣ ಗುಣಮುಖ ರಾಗಬೇಕೆಂಬುದೇ ನಮ್ಮ ಸಂಸ್ಥೆಯ ಮುಖ್ಯ ಉದ್ದೇಶವಾಗಿದೆ. ಅವರ ಜೀವನದ ಹೊರೆ ಅವರೆ ಹೊತ್ತುಕೊಂಡು ಹೋಗ್ಬೇಕು ಎಂದು ತಿಳಿಸಿರುತ್ತೇನೆ. ಈ ಕಾರ್ಯಕ್ರಮದಲ್ಲಿ ಒಟ್ಟು 10 ಜನ್ರು ಭಾಗವಹಿಸಿದರು. ವರದಿಗಾರರು: ಸಂಗೀತಾ

## "ಮಾನಸಿಕ ಅಸ್ವಸ್ಥತೆಯ ಬಗ್ಗೆ ಜಾಗೃತಿ ಕಾರ್ಯಕ್ರಮ"



ದಿನಾಂಕ 3.3.2025 ರಂದು ಕಮಲನಗರ ತಾಲೂಕಿನ ಕೋರ್ಯಾಳ್ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಸಂಗೀತ ಮಾನಸಿಕ ಹೊಂದಿದ್ದ ವ್ಯಕ್ತಿಗಳನ್ನು ಕೂಡಿಸಿಕೊಂಡು ಮಾನಸಿಕ ಅಸ್ವಸ್ಥತೆಯ ಬಗ್ಗೆ ಜಾಗೃತಿ ಕಾರ್ಯಕ್ರಮವನ್ನು ಮಾಡಿದರು. ಮಾನಸಿಕ ಅಸ್ವಸ್ಥತೆ ಎಂದರೇನು? ಮಾನಸಿಕ ಅಸ್ವಸ್ಥತೆಯ ಲಕ್ಷಣಗಳು, ಮಾನಸಿಕ ಕಾಯಿಲೆಗೆ ಒಳಗಾಗಿದ್ದ ವ್ಯಕ್ತಿಗಳನ್ನು ಯಾವ ರೀತಿ ಪತ್ತೆ ಹಚ್ಚಬೇಕು, ಎಂಬುದಾಗಿ ತಿಳಿಸಿದರು. ಇದು ಒಂದು ಮೆದುಳಿನ ಕಾಯಿಲೆಯಾಗಿದ್ದು, ಈ ಕಾಯಿಲೆಯು ಎಲ್ಲರಿಗೂ ಬರಬಹುದು, ಈ ಕಾಯಿಲೆಯು ಬಂದಂತಹ ವ್ಯಕ್ತಿಗಳ ನಡುವಳಿಕೆಯು ವಿಚಿತ್ರವಾಗಿ ವರ್ತಿಸುತ್ತಾರೆ. ತನ್ನಷ್ಟಕ್ಕೆ ತಾನೇ ವಿನಾಕಾರಣ ನಗುವುದು, ವಿನಾಕಾರಣ ಅಳುವುದು, ವಿನಾಕಾರಣ ಕೋಪ ಮಾಡುವುದು, ನಿರಂತರವಾಗಿ ನಿದ್ರೆ ಮಾಡುವುದು, ಹೀಗೆ ಅನೇಕ ರೀತಿಯ ಲಕ್ಷಣಗಳನ್ನು ನಾವು ನೋಡಬಹುದು. ಇಂತಹ ವ್ಯಕ್ತಿಗಳನ್ನು ಮತ್ತೆ ಸಮಾಜದಲ್ಲಿ ಬದುಕು ಕಟ್ಟಿಕೊಳ್ಳುವಂತೆ ನಮ್ಮ ಆರ್ಬೀಟ್ ಸಂಸ್ಥೆಯು ಸಮಾಜ ಸೇವೆಯೇ ಮಾಡುತ್ತಲೇ ಬಂದಿದೆ, ಇದರ ಮುಖ್ಯ ಉದ್ದೇಶವೇನೆಂದರೆ? ಅವರು ಕೂಡ ಸಮಾಜದಲ್ಲಿ ನಮ್ಮಂತೆ ಒಳ್ಳೆಯ ಜೀವನ ನಡೆಸಬೇಕೆಂಬುದೇ ಮುಖ್ಯ ಉದ್ದೇಶವಾಗಿದೆ. ಹೀಗೆ ಮಾನಸಿಕ ಹೊಂದಿದ್ದ ವ್ಯಕ್ತಿಯನ್ನು ಮೂಢನಂಬಿಕೆಗೆ ಬಲಿಯಾಗದೆ, ಅವರಿಗೆ ಸರಿಯಾಗಿ ಚಿಕಿತ್ಸೆ ಕೊಡಿಸುವುದರ ಮೂಲಕ ಅವರನ್ನು ಗುಣಪಡಿಸಬಹುದು ಎಂದು ತಿಳಿಸಿದರ. ಈ ಜಾಗೃತಿ ಕಾರ್ಯಕ್ರಮದಲ್ಲಿ ಒಟ್ಟು 13 ಜನರು ಭಾಗವಹಿಸಿದ್ದರು. ವರದಿಗಾರರು: ಸಂಗೀತಾ

## "ವಿಶ್ವ ಮಹಿಳಾ ದಿನಾಚರಣೆ ಮತ್ತು ಉಚಿತ ಆರೋಗ್ಯ ತಪಾಸಣೆ ಶಿಬಿರ"



ಮಾರ್ಚ್ 19 2025ರಂದು ಔರಾದ್ (ಬಿ) ತಾಲೂಕಿನ ಸಂತಪುರ್ ಗ್ರಾಮದಲ್ಲಿ ವಿಶ್ವ ಮಹಿಳಾ ದಿನಾಚರಣೆ ಮತ್ತು ಉಚಿತ ಆರೋಗ್ಯ ತಪಾಸಣೆ ನಡೆಸಲಾಯಿತು. ಎಲ್ಲಾ ಮಹಿಳೆಯರಿಗಾಗಿ ಹಕ್ಕು, ಸಮಾನತೆ, ಸಬಲೀಕರಣ" ದೀಪಾಲಯ, ಆರ್ಬಿಟ್, ಡಾನ್ ಬಾಸ್ಕೋ ಹಾಗೂ ಯುಪ್ರಸಿ ನಿಲಯ ಸಮಾಜ ಸೇವಾ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತು ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ದೀಪಾಲಯ ಸಮಾಜ ಸೇವಾ ಸಂಸ್ಥೆ, ಸಂತಪೂರದಲ್ಲಿ ಆಯೋಜಿಸಲಾಯಿತು. ದಿವ್ಯ ಸಾನಿಧ್ಯ, ಪರಮ ಪೂಜ್ಯ ಡಾ. ರಾಬರ್ಟ್ ಮೈಕಲ್ ಮಿರಾಂದ ಧರ್ಮಾಧ್ಯಕ್ಷರು ಗುಲ್ಬರ್ಗ ಧರ್ಮ ಕ್ಷೇತ್ರ, ಸಿಸ್ಟರ್ ರೆನ್ನಿ ಡಿಸಿಲ್ವಾ, ಎಸ್.ಆರ್.ವಿ ವಕೀಲರು, ಮಂಗಳೂರು. ಉಪನ್ಯಾಸಕರು, ಕುಮಾರಿ ರಾಜ ಯೋಗಿನಿ ಬಿ.ಕೆ ಸುಹಾಸಿನಿ ಸಂಚಾಲಕರು ಪ್ರಜಾಪಿತ ಬ್ರಹ್ಮಕುಮಾರಿ, ಔರಾದ್. ಶ್ರೀಮತಿ ಮಂಗಳ ಭಗವತ್ ಸಾರ್ವಜನಿಕ ಸಂಪರ್ಕ ಅಧಿಕಾರಿ, ಅಂಚೆ ಕಚೇರಿ ಬೀದರ್. ಶ್ರೀಮತಿ ರೇಣುಕ ಬಾತಿಲಕರ್ ಪಿ.ಎಸ್.ಐ ಪೊಲೀಸ್ ಠಾಣೆ, ಔರಾದ್. ಫಾದರ್ ಅನಿಲ್ ವಿಕ್ಟರ್ ವಾಸ್ ನಿರ್ದೇಶಕರು, ಆರ್ಬಿಟ್ ಸಮಾಜ ಸೇವಾ ಸಂಸ್ಥೆ, ಹುಮನಬಾದ. ಫಾದರ್ ಸ್ಟಿವನ್ ಲೋರೆನ್ಸ್ ನಿರ್ದೇಶಕರು, ಡಾನ್ ಬಾಸ್ಕೋ, ಬೀದರ್. ಫಾದರ್ ಅರುಣ್ ಲಾರೆನ್ಸ್ ನಿರ್ದೇಶಕರು, ಹೋಲಿ ಕ್ರೂಸ್ ದೇವಾಲಯ, ಸಂತಪೂರ. ಫಾದರ್ ಸುನಿಲ್ ಅಂದ್ರಾದೆ ನಿರ್ದೇಶಕರು, ಕ್ರಿಸ್ತ ರಾಜ ದೇವಾಲಯ ಉಜನಿ. ಭಗಿನಿ ಹೆಲೆನ್ ಮುಖ್ಯಸ್ಥರು, ಯುಪ್ರೆಸಿ ನಿಲಯ, ಧೂಪತ್ ಮಹಗಾಂವ್, ರೀಮಾ ಮುಖ್ಯಸ್ಥರು, ಮರಿಯ ಕೃಪಾ ಕಾನ್ವೆಂಟ್, ಸಂತಪೂರ, ಲೀನೆಟ್, ನಿರ್ದೇಶಕರು, ದೀಪಾಲಯ ಸಮಾಜ ಸೇವಾ ಸಂಸ್ಥೆ, ಸಂತಪೂರ: ಶ್ರೀಮತಿ ಇವಾಂಜಲಿ ಎಸ್.ಹೆಚ್.ಜಿ ಸದಸ್ಯರು, ಉಜನಿ. ಶ್ರೀಮತಿ ಯಶೋಧ ಎಸ್.ಹೆಚ್.ಜಿ ಸದಸ್ಯರು, ಕೌಠ. ಶ್ರೀಮತಿ ಗೌರಮ್ಮ ಪವಿತ್ರ ಎಸ್.ಹೆಚ್.ಜಿ ಸದಸ್ಯರು ಆಲೂರ್ ಉಪಸ್ಥತರಿದ್ದರು. ಈ ಕಾರ್ಯಕ್ರಮದಲ್ಲಿ ಒಟ್ಟು 350 ಜನರು ಭಾಗಿಯಾಗಿದ್ದರು.

ವರದಿಗಾರರು: ರಫೀಕ್

## "ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮ"



ಇಂದು ದಿನಾಂಕ 20.03.2025 ರಂದು ಭಾಲ್ಕಿ ತಾಲೂಕಿನ ಡೊಂಗಾಪುರ್ ಗ್ರಾಮದಲ್ಲಿ ಮಾನಸಿಕ ಸ್ವಸ್ಥರ ಕುರಿತು ಜಾಗೃತಿ ಮೂಡಿಸಲಾಯಿತು, ಈ ಜಾಗೃತಿ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾದಂತ ಆರ್ಬಿಟ್ ಸಂಸ್ಥೆಯ ಎಲ್.ಎಲ್.ಎಲ್.ಎಫ್ ಕಾರ್ಯಕರ್ತರಾದ ಶ್ರೀ ಪ್ರದೀಪ ಅವರು ವ್ಯಕ್ತಿಗೆ ಮಾನಸಿಕ ರೋಗ ಹೇಗೆ ಬರುತ್ತದೆ ಎಂಬುದಾಗಿ ವಿವರಿಸಿದರು. ಅಂದರೆ ಒಬ್ಬ ವ್ಯಕ್ತಿಯ ಜೀವನದಲ್ಲಿ ಆದಂತ ಕಹಿ ಘಟನೆಯನ್ನು ಪುನಃ ಪುನಃ ನೆನಪು ಮಾಡಿ ಖಿನ್ನತೆಗೆ ಒಳಗಾಗಿ ಮಾನಸಿಕ ರೋಗಕ್ಕೆ ತುತ್ತಾಗಿರುತ್ತಾನೆ. ಈ ರೋಗವು ಒಂದು ಮೆದುಳಿನ ರೋಗ. ಮೆದುಳಿನಲ್ಲಿ ಇರುವಂತಹ ರಾಸಾಯನಿಕ ಕ್ರಿಯೆಗಳಲ್ಲಿ ಬದಲಾವಣೆ ಉಂಟಾದಾಗ ಅಥವಾ ಏರುಪೇರು ಉಂಟಾದಾಗ ಮನುಷ್ಯನು ಈ ರೋಗಕ್ಕೆ ತುತ್ತಾಗುತ್ತಾನೆ. ಈ ರೋಗದ ಲಕ್ಷಣಗಳೆಂದರೆ ವಿನಾಕಾರಣ ಅಳುವುದು, ವಿನಾಕಾರಣ ನಗುವುದು, ಬೀದಿ ಸುತ್ತುವುದು, ಚಿಕ್ಕ ಚಿಕ್ಕ ವಸ್ತುಗಳನ್ನು ಸಂಗ್ರಹಿಸುವುದು, ಅನುಮಾನ ಪಡುವುದು, ಕೋಪ ಮಾಡಿಕೊಳ್ಳುವುದು, ಯಾರಿಗೆ ಕೇಳಿಸಲಾರದಂತ ಶಬ್ದವನ್ನು ಕೇಳಿಸುವುದು, ಮುಂತಾದ ಲಕ್ಷಣಗಳು ಕಂಡುಬರುತ್ತವೆ, ಈ ಲಕ್ಷಣಗಳು ಕಂಡು ಬಂದರೆ ವೈದ್ಯರ ಸಲಹೆ ಪಡೆಯುವುದು ಎಂದು ಸಲಹೆ ನೀಡಲಾಯಿತು. ತಿಂಗಳಿನ ಎರಡನೇ ಮಂಗಳವಾರ ಭಾಲ್ಕಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಜಿಲ್ಲಾ ಮಾನಸಿಕ ಶಿಬಿರ ಇರುತ್ತದೆ ಈ ಶಿಬಿರದಲ್ಲಿ ಬಂದು ಉಚಿತ ಚಿಕಿತ್ಸೆಯನ್ನು ಪಡೆಯಬಹುದು ಅಥವಾ ಇಂಥ ಲಕ್ಷಣ ಇರುವವರಿಗೆ ಕಂಡು ಬಂದರೆ ನಮ್ಮ ಸಂಸ್ಥೆಯ ಸಹಾಯವಾಣಿಯಾದಂತಹ 9036664271 ಕರೆ ಮಾಡಿ ಮಾಹಿತಿ ನೀಡುವುದು ಎಂದು ಜಾಗೃತಿ ಮೂಡಿಸಲಾಯಿತು. ಈ ಜಾಗೃತಿ ಕಾರ್ಯಕ್ರಮದಲ್ಲಿ ಗ್ರಾಮದ 25 ಜನ ಭಾಗಿಯಾಗಿದ್ದರು. ವರದಿಗಾರರು: ಪ್ರದೀಪ್

## "ಮಾನಸಿಕ ಅಸ್ವಸ್ಥತೆ ಮತ್ತು ಕ್ಯಾನ್ಸರ್ ಕುರಿತು ಅರಿವು"



ದಿನಾಂಕ 08/03/2025 ರಂದು ಭಾಲ್ಕಿ ತಾಲೂಕಿನ ಹಾಲಹಳ್ಳಿ ಗ್ರಾಮದ ಸರಕಾರಿ ಪ್ರಾಥಮಿಕ ಶಾಲೆ ಮಕ್ಕಳಿಗೆ ನವಜೀವನ (LLLF) ಕಾರ್ಯಕ್ರಮದ ಕಾರ್ಯಕರ್ತರಾದ ಕುಮಾರ್ ರವರಿಂದ ಮಾನಸಿಕ ಅಸ್ವಸ್ಥತೆ ಮತ್ತು ಕ್ಯಾನ್ಸರ್ ಕುರಿತು ಅರಿವು ಮೂಡಿಸಲಾಯಿತು. ಮಾನಸಿಕ ರೋಗ ಎಂದರೇನು? ಮಾನಸಿಕ ರೋಗಕ್ಕೆ ಕಾರಣ, ಮಾನಸಿಕ ಕಾಯಿಲೆ ಲಕ್ಷಣಗಳು ಮತ್ತು ಚಿಕಿತ್ಸೆ ಬಗ್ಗೆ ಅರಿವು ಮೂಡಿಸಲಾಯಿತು. ಜೊತೆಯಲ್ಲಿ ಕ್ಯಾನ್ಸರ್ ಕಾಯಿಲೆಯು ಹೇಗೆ ಬರುತ್ತದೆ ಮತ್ತು ಅದನ್ನು ಪತ್ತೆ ಹಚ್ಚುವ ವಿಧಾನವನ್ನು ತಿಳಿಸಲಾಯಿತು. ಸರಕಾರದಿಂದ ಬರುವ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿ, ಮಾನಸಿಕ ಕಾಯಿಲೆ ಒಂದು ಮೆದುಳಿನ ಕಾಯಿಲೆ ಆಗಿದೆ ಯಾರು ಮೂಡನಂಬಿಕೆಗೆ ಒಳಗಾಗದೆ ಕೂಡಲೇ ಚಿಕಿತ್ಸೆ ಪಡೆದುಕೊಳ್ಳಬೇಕೆಂದು ಹೇಳಲಾಯಿತು. ಹಾಗೂ ಪ್ರತಿ ತಿಂಗಳು ಎರಡನೆ ಮಂಗಳವಾರ ಭಾಲ್ಕಿಯಲ್ಲಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಜಿಲ್ಲಾ ಮಾನಸಿಕ ಶಿಬಿರ ಇರುತ್ತದೆ ಎಂದು ಹೇಳಲಾಯಿತು. ಈ ಜಾಗೃತಿ ಕಾರ್ಯಕ್ರಮದಲ್ಲಿ ಒಟ್ಟು 36 ಜನ ಶಾಲೆಯ ಮಕ್ಕಳು ಹಾಗೂ 1 ಜನ ಶಿಕ್ಷಕರು

ಉಪಸ್ಥಿತರಿದ್ದರು.

## “ಮಾನಸಿಕ ಅಸ್ವಸ್ಥರ ಜಾಗೃತಿ ಕಾರ್ಯಕ್ರಮ”



ದಿನಾಂಕ 03/03/2025 ರಂದು ಕಮಲನಗರ್ ತಾಲೂಕಿನ ಬೇಡ್ಕುಂದಾ ಗ್ರಾಮದಲ್ಲಿ, ಆರ್ಬಿಟ್ ಸಂಸ್ಥೆಯ ಮತ್ತು ಎಲ್.ಎಲ್.ಎಲ್.ಎಫ್ ಸಯುಕ್ತಾ ಸ್ರಯದಲ್ಲಿ, ಹನುಮಾನ್ ಮಂದಿರ ಬಳಿ ಇದ್ದ ಜನರಿಗೆ ಮಾನಸಿಕ ಅಸ್ವಸ್ಥರ ಜಾಗೃತಿ ಕಾರ್ಯಕ್ರಮ ನೀಡಲಾಯಿತು. ಆರೋಗ್ಯ ಎಂದರೇನು? ಮಾನಸಿಕವಾಗಿ, ದೈಹಿಕ, ಶಾರೀರಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಸದೃಢ ಇರುವದೆ ಆರೋಗ್ಯ ಎಂದು ಕರೆಯುತ್ತಾರೆ. ಮಾನಸಿಕ ರೋಗ ಬರಲು ಕಾರಣವೇನೆಂದರೆ ಒಬ್ಬ ವ್ಯಕ್ತಿಯ ಜೀವನದಲ್ಲಿ ನಡೆದ್ ಕಹಿ ಘಟನೆಯಿಂದ ಅದನ್ನೇ ಪುನಃ ಪುನಃ ವಿಚಾರ ಮಾಡಿ ಮಾಡಿ ಮಾನಸಿಕ ರೋಗಕ್ಕೆ ತುತ್ತಾಗುತ್ತಾನೆ, ಈ ರೋಗವು ಒಂದು ಮೆದುಳಿನ ರೋಗ ಮೆದುಳಿನಲ್ಲಿರುವ ರಾಸಾಯನಿಕ ಕ್ರಿಯೆಗಳಲ್ಲಿ ಬದಲಾವಣೆ ಉಂಟಾದಾಗ ವಿಚಿತ್ರವಾಗಿ ವರ್ತಿಸಲು ಪ್ರಾರಂಭಿಸುತ್ತಾರೆ, ಉದಾಹರಣೆಗೆ ತನ್ನಲ್ಲೆ ನಗುವುದು, ವಿನಾಕಾರಣ ಅಳುವುದು, ಬೀದಿ ಸುತ್ತುವುದು, ಅನುಮಾನ ಪಡುವಂಥದ್ದು, ಕೋಪ, ವಿಚಿತ್ರ ನಡವಳಿಕೆ ಇತ್ಯಾದಿ ಲಕ್ಷಣಗಳು ಕಂಡುಬರುತ್ತದೆ. ಈ ಲಕ್ಷಣಗಳು ಕಂಡು ಬಂದ ವ್ಯಕ್ತಿಗೆ ಆಸ್ಪತ್ರೆಗೆ ತೆಗೆದು ಕೊಂಡು ಹೋಗಿ ಸೂಕ್ತ ಚಿಕಿತ್ಸೆ ನೀಡುವುದು ಪ್ರತಿ ತಿಂಗಳ ಎರಡನೇ ಶುಕ್ರವಾರದಂದು ಸಂತ್ಪೂರ್ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮನೋವೈದ್ಯರು ಬರುತ್ತಾರೆ, ಉಚಿತವಾಗಿ ಚಿಕಿತ್ಸೆ ನೀಡುತ್ತಾರೆ. ನಮ್ಮ ಸಂಸ್ಥೆಯ ಸಹಾಯವಾಣಿ 9036664271 ಕರೆ ಮಾಡಿ ಮಾಹಿತಿ ನೀಡುವುದು. ಈ ಒಂದು ಜಾಗೃತಿಕರ ಕಾರ್ಯಕ್ರಮದಲ್ಲಿ ಗ್ರಾಮದ 12 ಜನರು ಭಾಗಿಯಾಗಿದ್ದರು.

## “ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮ”



07 ಮಾರ್ಚ್ 2025ರಂದು ಔರಾದ್ ತಾಲೂಕಿನ ಜೀರ್ಗಾ ಗ್ರಾಮದಲ್ಲಿ ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಮೂಡಿಸಲಾಯಿತು. ಈ ಜಾಗೃತಿ ಕಾರ್ಯಕ್ರಮದ ಆರ್ಬಿಟ್ ಸಂಸ್ಥೆಯ ಎಲ್.ಎಲ್.ಎಲ್.ಎಫ್ ಕಾರ್ಯಕರ್ತರಾದ ಶ್ರೀ ಯೋಹಾನ ಅವರು ಮಾತನ್ನಾಡಿ, ಒಬ್ಬ ವ್ಯಕ್ತಿಗೆ ಮಾನಸಿಕ ರೋಗ ಹೇಗೆ ಬರುತ್ತದೆ ಎಂಬುದಾಗಿ ವಿವರಿಸಲಾಯಿತು, ಅಂದರೆ ಒಬ್ಬ ವ್ಯಕ್ತಿಯ ಜೀವನದಲ್ಲಿ ಆದಂತ ಕಹಿ ಘಟನೆಯನ್ನು ಪುನಃ ಪುನಃ ನೆನಪು ಮಾಡಿ ಖಿನ್ನತೆಗೆ ಒಳಗಾಗಿ ಮಾನಸಿಕ ರೋಗಕ್ಕೆ ತುತ್ತಾಗಿರುತ್ತಾನೆ, ಈ ರೋಗವು ಒಂದು ಮೆದುಳಿನ ರೋಗ, ಮೆದುಳಿನಲ್ಲಿ ಇರುವಂತಹ ರಾಸಾಯನಿಕ ಕ್ರಿಯೆಗಳಲ್ಲಿ ಬದಲಾವಣೆ ಉಂಟಾದಾಗ ಅಥವಾ ಏರುಪೇರು ಉಂಟಾದಾಗ ಮನುಷ್ಯನು ಈ ರೋಗಕ್ಕೆ ತುತ್ತಾಗುತ್ತಾನೆ. ಮಾನಸಿಕ ಅಸ್ವಸ್ಥತೆಯಿಂದ ಬಳಲುವ ವ್ಯಕ್ತಿಗಳನ್ನು ವೈದ್ಯರ ಸಲಹೆ ಪಡೆಯುವುದು ಎಂದು ಸಲಹೆ ನೀಡಲಾಯಿತು. ತಿಂಗಳಿನ ಎರಡನೇ ಶುಕ್ರವಾರದಂದು ಸಂತ್ಪೂರ್ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಜಿಲ್ಲಾ ಮಾನಸಿಕ ಶಿಬಿರ ಇರುತ್ತದೆ. ಈ ಶಿಬಿರದಲ್ಲಿ ಬಂದು ಉಚಿತ ಚಿಕಿತ್ಸೆಯನ್ನು ಪಡೆಯಬಹುದು ಅಥವಾ ಇಂಥ ಲಕ್ಷಣ ಕಂಡು ಬಂದರೆ ನಮ್ಮ ಸಂಸ್ಥೆಯ ಸಹಾಯವಾಣಿಯಾದಂತಹ 9036664271 ಕರೆ ಮಾಡಿ ಮಾಹಿತಿ ನೀಡುವುದು ಎಂದು ಜಾಗೃತಿ ಮೂಡಿಸಲಾಯಿತ್ತು. ಈ ಜಾಗೃತಿ ಕಾರ್ಯಕ್ರಮದಲ್ಲಿ ಗ್ರಾಮದ 22 ಜನ ಭಾಗಿಯಾಗಿದ್ದರು.

## “ಕ್ಯಾನ್ಸರ್ ಮತ್ತು ಮಾನಸಿಕ ಅಸ್ವಸ್ಥರ ಕಾಯಿಲೆಯ ಕುರಿತು ಜಾಗೃತಿ”



ಮಾರ್ಚ್ 13 2025ರಂದು ಔರಾದ್ ತಾಲೂಕಿನ ಚಟ್ನಾಳ್ ಗ್ರಾಮದಲ್ಲಿ ದೀಪಾಲಯ ಸಮಾಜ ಸೇವೆಯ ನಿರ್ದೇಶಕರು ಸಿಸ್ಟರ್ ಲಿನೆಟ್ ಮತ್ತು ಆರ್ಬಿಟ್ ಸಂಸ್ಥೆಯ (LLLF) ನ ಕಾರ್ಯಕರ್ತರಾದ ಯೋಹಾನ ರವರು ಕ್ಯಾನ್ಸರ್ ಮತ್ತು ಮಾನಸಿಕ ಅಸ್ವಸ್ಥರ ಕಾಯಿಲೆಯ ಕುರಿತು ಜಾಗೃತಿ ಮೂಡಿಸುತ್ತ, ಮಾನಸಿಕ ಕಾಯಿಲೆ ತುತ್ತಾಗಲು ಕಾರಣವೇನೆಂದರೆ ಜೀವನದಲ್ಲಿ ಯಾವುದೋ ಒಂದು ಕಹಿ ಘಟನೆಯಿಂದ ಈ ಕಾಯಿಲೆಗೆ ಗುರಿಯಾಗುತ್ತಾರೆ, ಈ ಕಾಯಿಲೆಯನ್ನು ಪತ್ತೆ ಹಚ್ಚಿ ಸೂಕ್ತವಾದ ಚಿಕಿತ್ಸೆ ನೀಡಿದರೆ. ಈ ಕಾಯಿಲೆ ಬಂದಾಗ ಡಾಕ್ಟರ ಸಲಹೆ ಪಡೆದು ಕೊಂಡು ಸೂಕ್ತ ಚಿಕಿತ್ಸೆ ಪಡೆದು. ಕ್ಯಾನ್ಸರ್ ಕಾಯಿಲೆಯನ್ನು ಪ್ರಾರಂಭದಲ್ಲಿ ಪತ್ತೆಹಚ್ಚಿ ಚಿಕಿತ್ಸೆ ನೀಡಿ ಗುಣಪಡಿಸಬಹುದು. ಕ್ಯಾನ್ಸರ್ ಕಾಯಿಲೆ ಬರಲು ಕಾರಣಗಳು ಅಧಿಕವಾಗಿ ಧೂಮಪಾನ, ಮದ್ಯಪಾನ, ಗುಟಖ, ಬಿಡಿ ಮತ್ತು ಸಿಗರೇಟ್ಟೆ ಸೇವನೆಯಿಂದ ಕ್ಯಾನ್ಸರ್ ಕಾಯಿಲೆಗಳು ಬರುತ್ತವೆ. ವಿಶೇಷವಾಗಿ, ಮಹಿಳೆಯರಲ್ಲಿ ಸ್ಥನ ಮತ್ತು ಗರ್ಭಕೋಶದ ಕ್ಯಾನ್ಸರ್ ಬರುವ ಸಾಧ್ಯತೆ ಹೆಚ್ಚು ಹೆಣ್ಣುಮಕಳು ಶರಿರದಲಿ ಏನಾದರೂ ಏರು ಪೇರು ಕಾಣಿಸಿಕೊಂಡರೆ ತಕ್ಷಣ್ ಡಾಕ್ಟರ ಸಲಹೆ ಪಡೆವುಯುವದು ಒಳೆಯದು ಎಂದು ಹೇಳಿದರು. ಈ ಜಾಗೃತಿ ಕಾರ್ಯಕ್ರಮದಲ್ಲಿ 12 ಜನ ಭಾಗವಹಿಸಿದ್ದರು.

ವರದಿಗಾರರು: ಯೋಹಾನ್

## “ಮಾನಸಿಕ ಅಸ್ವಸ್ಥತೆ ಬಗ್ಗೆ ಜಾಗೃತಿ ಕಾರ್ಯಕ್ರಮ”



05 ಮಾರ್ಚ್ 2025ರಂದು ಹುಲಸೂರ್ ತಾಲೂಕಿನ ಹಾಲಹಳ್ಳಿ ಗ್ರಾಮದಲ್ಲಿ ಇರುವಂತಹ ರಮಾಬಾಯಿ ಸಂಘದ ಮಹಿಳೆಯರಿಗೆ ಹಾಗೂ ಪಾಲಕ ಪೋಷಕತಿಗೆ ಲಿವ್,ಲವ್,ಲಾಫ್, ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ಅಮರ ಅವರು ಮಾನಸಿಕ ಅಸ್ವಸ್ಥತೆ ಬಗ್ಗೆ ಜಾಗೃತಿ ಮೂಡಿಸಿದರು. ದೈಹಿಕವಾಗಿ, ಮಾನಸಿಕವಾಗಿ, ಶರೀರಕವಾಗಿ, ಸಾಮಾಜಿಕವಾಗಿ, ಅಪರಿಪೂರ್ಣ ಆರೋಗ್ಯ ಮಾನಸಿಕ ಅಸ್ವಸ್ಥತೆ ಎಂದು ಕರೆಯುತ್ತಾರೆ. ಇದು ಒಂದು ಮೆದುಳಿನ ಕಾಯಿಲೆಯಾಗಿದ್ದು, ರಾಸಾಯನಿಕ ಕ್ರಿಯೆಯಲ್ಲಿ ಏರುಪೇರಾಗಿ ಮನುಷ್ಯನ ವರ್ತನೆಯಲ್ಲಿ ಬದಲಾವಣೆಯನ್ನಾಗಿ ತನ್ನ ದಿನನಿತ್ಯದ ಚಟುವಟಿಕೆಗಳಲ್ಲಿ ತೊಡಕು ಉಂಟುಮಾಡುತ್ತದೆ ಇದು ಮಾನಸಿಕ ಅಸ್ವಸ್ಥತೆ ಎಂದು ಹೇಳುತ್ತೇವೆ. ಮಾನಸಿಕ ಕಾಯಿಲೆಯ ಲಕ್ಷಣಗಳು, ಆತಂಕ ಖಿನ್ನತೆ ಭಯ. ಇವು ಲಕ್ಷಣಗಳಾಗಿವೆ. ಮಾನಸಿಕ ಕಾಯಿಲೆಗೆ ಚಿಕಿತ್ಸೆ ಇದೆ, ಸತತವಾಗಿ ಮಾತ್ರೆಗಳನ್ನು ತೆಗೆದುಕೊಳ್ಳುವುದರಿಂದ ಸ್ವಲ್ಪಸ್ವಲ್ಪವಾಗಿ ಕಾಯಿಲೆಯು ಗುಣವಾಗುತ್ತದೆ. ಈ ಕಾಯಿಲೆಗೆ ಒಳಗಾದಂತ ವ್ಯಕ್ತಿಗಳಿಗೆ ಪ್ರೀತಿಯಿಂದ ಮಾತನಾಡಿಸಬೇಕು. ಮತ್ತು ದಿನನಿತ್ಯದ ಕೆಲಸಗಳನ್ನು ನಾವು ಸಮಾಧಾನದಿಂದ ಅವರಿಗೆ ತಿಳಿಸಬೇಕು. ಎಲ್ಲರ ಜೊತೆ ಬೆರೆಯುವಂತೆ ಮನೆಯವರು ನೋಡಿಕೊಳ್ಳಬೇಕು. ಹೀಗೆ ಮಾಡುವುದರಿಂದ ಅವರಿಗೆ ನಾನು ಮಾನಸಿಕ ರೋಗಕ್ಕೆ ತುತ್ತಾಗಿದ್ದೇನೆ ಎಂಬುದನ್ನು ಮರೆತು ಅವರು ಸಂತೋಷದಿಂದ ಜೀವನವನ್ನು ನಡೆಸುತ್ತಾರೆ. ಈ ಜಾಗೃತಿಕ ಕಾರ್ಯಕ್ರಮದಲ್ಲಿ ಒಟ್ಟು 15 ಜನ ಮಹಿಳೆಯರು ಭಾಗವಹಿಸಿದ್ದರು. ವರದಿಗಾರರು: ಅಮರ



## “ಜೈ ಮಾತೆ ಪಾಲಕ ಪೋಷಕರ ಸಂಘ ರಚನೆ”



ದಿನಾಂಕ 06 ಮಾರ್ಚ್ 2025ರಂದು ರೇಕುಳಗಿ ಗ್ರಾಮದಲ್ಲಿ ನವಜೀವನ ಲಿವ್,ಲವ್,ಲಾಫ್ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಅಭೀಷೇಕ್ ರವರು ಜೈ ಮಾತೆ ಎಂಬ ಹೆಸರಿನ ಪಾಲಕ ಪೋಷಕರ ಸಂಘ ರಚನೆ ಮಾಡಿದರು. ಈ ಮಹಾಸಂಘದಲ್ಲಿ 6 ಜನ ಫಲಾನುಭವಿಗಳಿದ್ದರು. ಮತ್ತು 4 ಜನ ಆಶಾ ಕಾರ್ಯಕರ್ತೆಯರು ಇದ್ದರು. ಮೊದಲಿಗೆ ಈ ಗುಂಪು ರಚನೆ ಮಾಡಿದ್ದು ಉದ್ದೇಶವೇನೆಂದರೆ ನಿಮ್ಮ ಒಂದು ಗುಂಪಲ್ಲಿ ಏನೇ ಸಮಸ್ಯೆ ಇದ್ದರೂ ಅಥವಾ ನಿಮ್ಮ ಫಲಾನುಭವಿಗೆ ಮಾತ್ರೆಗಳನ್ನು ಸರಿಯಾಗಿ ಸಿಗುತ್ತಿಲ್ಲ ಅಂದರೆ ಹಾಗು ಸರ್ಕಾರದ ಸೌಲಭ್ಯಗಳಿದ್ದರೂ ನಾವು ತಿಳಿಸಿರುತ್ತೆವೆ ನಿಮಗೆ ಎಲ್ಲಾ ಸೌಲಭ್ಯಗಳು ದೊರಕುವ ಹಾಗೆ ನೋಡಿಕೊಳ್ಳುತ್ತೇನೆ ಎಂದು ಧೈರ್ಯ ತುಂಬಿಸಿದರು.

## “ದೈನಂದಿನ ಚಟುವಟಿಕೆಗಳ ತರಬೇತಿ ಕಾರ್ಯಕ್ರಮ”



ದಿನಾಂಕ 10ಮಾರ್ಚ್ 2025ರಂದು ಬೀದರ ತಾಲೂಕಿನ ಕಮಠಾಣಾ ಗ್ರಾಮದಲ್ಲಿ ನವಜೀವನ ಲಿವ್,ಲವ್,ಲಾಫ್ ಕಾರ್ಯಕ್ರಮದ ಕಾರ್ಯಕರ್ತರಾದ ಅಭಿಷೇಕ ರವರು ದೈನಂದಿನ ಚಟುವಟಿಕೆಗಳ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದರು. ಈ ಕಾರ್ಯಕ್ರಮದ ಉದ್ದೇಶವು ಮಾನಸಿಕ ಅಸ್ವಸ್ಥತೆಗೆ ಒಳಗಾದ ವ್ಯಕ್ತಿಗಳ ಪಾಲಕ ಪೋಷಕರಿಗೆ ಯಾವ ರೀತಿ ನೋಡಿಕೊಳ್ಳಬೇಕು ಎಂಬುದರ ಬಗ್ಗೆ ಮಾಹಿತಿ ನೀಡಲಾಯಿತು. ಮಾನಸಿಕ ಅಸ್ವಸ್ಥೆಗೆ ಒಳಗಾದ ವ್ಯಕ್ತಿಗಳನ್ನು ನಾವು ಪ್ರೀತಿ ವಿಶ್ವಾಸದಿಂದ ಅವರಿಗೆ ದಿನನಿತ್ಯದ ಕೆಲಸಗಳಾದ ಬ್ರಷ್ ಮಾಡುವುದು, ಸ್ನಾನ ಮಾಡುವುದು, ತಲೆ ಬಾಚಿಕೊಳ್ಳುವುದು, ಊಟ ಮಾಡುವುದು ಮತ್ತು ಸರಿಯಾದ ಸಮಯಕ್ಕೆ ಮಾತ್ರೆಗಳನ್ನು ಸೇವಿಸುವುದು ಹೀಗೆ ಅನೇಕ ರೀತಿಯ ಕೆಲಸಗಳನ್ನು ತಾನಾಗಿಯೇ ಮಾಡಿಕೊಳ್ಳುವಂತೆ ಪಾಲಕರು ಅವರಿಗೆ ತಿಳಿಸುವಂತದು. ಹೀಗೆ ಮಾಡುವುದರಿಂದ ಅವರು ಮಾನಸಿಕ ಕಾಯಿಲೆಯಿಂದ ಸ್ವಲ್ಪ ಸ್ವಲ್ಪ ಹೊರಬರುವಂತೆ ಪ್ರಯತ್ನಿಸುತ್ತಾರೆ. ಈ ಕಾರ್ಯಕ್ರಮದ ಉದ್ದೇಶವು ಮಾನಸಿಕ ಕಾಯಿಲೆ ಹೊಂದಿದ್ದ ವ್ಯಕ್ತಿಗಳು ತನ್ನ ಕೆಲಸ ತಾನಾಗಿಯೇ ಮಾಡಿಕೊಳ್ಳುವುದರಿಂದ ಅವರು ನನಗೆ ಕಾಯಿಲೆ ಇದೆ ಎಂಬುದನ್ನೇ ಮರೆತು ಹೋಗುತ್ತಾರೆ. ಹೀಗೆ ಮಾಡುವುದರಿಂದ ಅವರು ಮಾನಸಿಕ ಕಾಯಿಲೆಯಿಂದ ಸಂಪೂರ್ಣ ಗುಣಮುಖರಾಗಬೇಕೆಂಬುದೇ ನಮ್ಮ ಸಂಸ್ಥೆಯ ಮುಖ್ಯ ಉದ್ದೇಶವಾಗಿದೆ. ವರದಿಗಾರರು: ಅಭೀಷೇಕ್

## “ಮಾನಸಿಕ ಅಸ್ವಸ್ಥರ ಪಾಲಕ ಪೋಷಕರು ಸಭೆ”




ದಿನಾಂಕ 11 ಮಾರ್ಚ್ 2025ರಂದು ಸುಲ್ತಾನಪುರ ಗ್ರಾಮದ "ಸುಲ್ತಾನ" ಮಾನಸಿಕ ಅಸ್ವಸ್ಥರ ಪಾಲಕ ಪೋಷಕರು ಸಭೆಯನ್ನು ನಡೆಸಲಾಯಿತು. ಈ ಸಂಘದ ಸಭೆಯಲ್ಲಿ ಮೊದಲು ಯಾವ ರೀತಿ ಮಾನಸಿಕ ಅಸ್ವಸ್ಥರಿಗೆ ಮಾತ್ರೆಗಳನ್ನು ನೀಡಬೇಕೆಂದು ತಿಳಿಸಲಾಯಿತು. ಮತ್ತು ಯಾವುದಾದರು ಸರ್ಕಾರ ಸೌಲಭ್ಯಗಳು ದೊರಕುತ್ತಿಲ್ಲ ಅಂದರೆ ಸರ್ಕಾರದ ಪ್ರತಿಯೊಂದು ಯೋಜನೆಯ ಇಲ್ಲವಾದಲ್ಲಿ ನೀವು ಒಗ್ಗಟ್ಟಿನಿಂದ ಈ ಯಲ್ಲ ಸಮಸ್ಯೆಗಳನ್ನು ಬಗೆಹರಿಸಲು ಒಂದು ಅರ್ಜಿ ಮೂಲಕ ಸಾಧ್ಯವಾಗುತ್ತದೆ. ಅದೇ ರೀತಿ ಎಲ್ಲಾ ಸರ್ಕಾರದ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಲಾಯಿತು. ಈ ಸಂಘದ ಸಭೆಯಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ ಲಿವ್,ಲವ್,ಲಾಫ್ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಅರುಣ್ ರವರು ಸಂಪೂರ್ಣ ಮಾಹಿತಿ ನೀಡಿದರು. ಐದು ಜನ ಪಾಲಕ ಪೋಷಕರು ಭಾಗವಹಿಸಿದರು. ವರದಿಗಾರರು: ಅರುಣ

## ಮಾನಸಿಕ ಅಸ್ವಸ್ಥರ ಕಾಯಿಲೆಯ ಕುರಿತು ಜಾಗೃತಿ”



13 ಮಾರ್ಚ್ 2025ರಂದು ಬಸವಕಲ್ಯಾಣ ತಾಲೂಕಿನ ಧನ್ನೂರ (ಕೆ) ಗ್ರಾಮದಲ್ಲಿ ಕ್ರಿಕೇಟ್ ಪ್ರೇಮಿ ಆಟ ಗಾರ್‌ರನ್ನು ಲಿವ್,ಲವ್,ಲಾಫ್ ಸಂಯುಕ್ತಾಶ್ರಯದಲ್ಲಿ ಆಕಾಶ್ ರವರು ಜಾಗ್ರತಿ ಮೂಡಿಸುತ್ತಾ ಮಾತನಾಡಿ, ದೈಹಿಕವಾಗಿ, ಮಾನಸಿಕವಾಗಿ, ಶರೀರಕವಾಗಿ, ಮತ್ತು ಸಾಮಾಜಿಕವಾಗಿ ಚೆನ್ನಾಗಿರುವುದೇ ಪರಿಪೂರ್ಣ ಆರೋಗ್ಯ. ಮಾನಸಿಕ ಅಸ್ವಸ್ಥತೆ ಎಂದರೆ, ಇದು ಒಂದು ಮೆದುಳಿನ ಕಾಯಿಲೆ, ಮೆದುಳಿನ ರಾಸಾಯನಿಕ ಕ್ರಿಯೆಯಲ್ಲಿ ಏರುಪೇರಾಗಿ ಮನುಷ್ಯನ ವರ್ತನೆಯಲ್ಲಿ ಬದಲಾವಣೆಯಾಗಿ, ತನ್ನ ದಿನನಿತ್ಯದ ಚಟುವಟಿಕೆಗಳಲ್ಲಿ ತೊಡಕು ಉಂಟಾಗುವುದನ್ನು ಮಾನಸಿಕ ಅಸ್ವಸ್ಥತೆ ಎಂದು ಹೇಳುತ್ತೇವೆ. ಕಾಯಿಲೆಯ ಲಕ್ಷಣಗಳು ಭಯ, ಆತಂಕ, ಖಿನ್ನತೆ, ಇತ್ಯಾದಿ ಇಂತಹ ಲಕ್ಷಣಗಳಿದ್ದರೆ, ಮನೋವೈದ್ಯರ ಬಳಿ ಚಿಕಿತ್ಸೆ ನೀಡುವುದರ ಮೂಲಕ ಗುಣಪಡಿಸಬಹುದು. ಸಮುದಾಯದಲ್ಲಿ ಮಾನಸಿಕ ಅಸ್ವಸ್ಥರು ಕಂಡರೆ ಅವರನ್ನು ನಿರ್ಲಕ್ಷಿಸದೆ ಸಹಾಯ ಮಾಡುವ ಭಾವನೆ ನಿಮ್ಮದಾಗಬೇಕು ಎಂದು ಹೇಳಿದರು. ಈ ಜಾಗೃತಿ ಕಾರ್ಯಕ್ರಮದಲ್ಲಿ 30 ಜನರು ಭಾಗವಹಿಸಿದರು.

ವರದಿಗಾರರು: ಆಕಾಶ

## “ಕೇರ್ ಟೇಕರ್ ಗ್ರೂಪ್ ಮೀಟಿಂಗ್”



ದಿನಾಂಕ 04 ಮತ್ತು 06 ಮಾರ್ಚ 2025 ರಂದು ಭಾಲ್ಕಿ ತಾಲೂಕಿನ ಕುಮಾರಚಿಂಚೋಳಿ ಮತ್ತು ಮಸೀಮಾಡು ಗ್ರಾಮದಲಿ ನವಜೀವನ (LLLF) ಕಾರ್ಯಕ್ರಮದ ಕಾರ್ಯಕರ್ತರಾದ ಕುಮಾರ್ ರವರಿಂದ ನಾಯಕ್ ಕೇರ್ ಟೇಕರ್ ಗ್ರೂಪ್ ಮೀಟಿಂಗ್ ಮಾಡಲಾಯಿತು. ಮಾನಸಿಕ ಅಸ್ವಸ್ಥರನ್ನು ಯಾವ ತರಹ ನೋಡಿಕೊಳ್ಳುವುದು ಮತ್ತು ಅವರಿಗೆ ದಿನಾ ಸರಕಾರಿ ಸೌಲಭ್ಯ ಗಳ ಬಗ್ಗೆ ಹೇಳಲಾಯಿತು ದಿನನಿತ್ಯ ಚಟವಟಿಕೆಗಳು ಮಾಡಿಸಬೇಕು ಕೆಲಸ ಕಾರ್ಯದಲ್ಲಿ ತೊಡಗಲು ತಿಳಿಸಬೇಕು ಎಂದು ಹೇಳಲಾಯಿತು. ಪ್ರತಿ ದಿನ ತಪ್ಪದೆ ಮಾತ್ರೆಗಳು ಸೇವನೆ ಮಾಡಲು ಹೇಳಬೇಕು, ಸರಕಾರಿ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಲಾಯಿತು ಹಾಗೂ ತಪ್ಪದೆ ಸಾರ್ವಜನಿಕ ಆಸ್ಪತ್ರೆಯಲ್ಲಿ ಜಿಲ್ಲಾ ಮಾನಸಿಕ ಶಿಬಿರ ಇರುತ್ತದೆ ಎಂದು ಹೇಳಲಾಯಿತು. ಉಚಿತವಾಗಿ ತಪಾಸಣೆ ಮಾಡಿಸಿಕೊಂಡು ಮಾತ್ರೆಗಳನ್ನು ತೆಗೆದುಕೊಳ್ಳಲು ತಿಳಿಲಾಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 5 ಜನ ಉಪಸ್ಥಿತರಿದ್ದರು. ವರದಿಗಾರರು: ಕುಮಾರ್



## "ಮಾನಸಿಕ ಅಸ್ವಸ್ಥತೆ ಮತ್ತು ಕ್ಯಾನ್ಸರ್ ಕುರಿತು ಅರಿವು"



ದಿನಾಂಕ 13 ಮಾರ್ಚ್ 2025ರಂದು ಬಸವಕಲ್ಯಾಣ ತಾಲೂಕಿನ ಸಸ್ತಾಪುರ್ ಗ್ರಾಮದ ಸರಕಾರಿ ಪ್ರೌಢಶಾಲೆಯ ಮಕ್ಕಳಿಗೆ ನವಜೀವನ ಲಿವ್,ಲವ್,ಲಾಫ್ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀಮತಿ ಸುಜಾತಾ ಅವರು ಮಾನಸಿಕ ಅಸ್ವಸ್ಥತೆ ಮತ್ತು ಕ್ಯಾನ್ಸರ್ ಕುರಿತು ಅರಿವು ಮೂಡಿಸಲಾಯಿತು. ಮಾನಸಿಕ ರೋಗ ಎಂದರೇನು?, ಮಾನಸಿಕ ರೋಗಕ್ಕೆ ಬಲವಾದ ಕಾರಣಗಳು, ಮಾನಸಿಕ ಕಾಯಿಲೆಯ ಲಕ್ಷಣಗಳು ಮತ್ತು ಚಿಕಿತ್ಸೆಯ ಬಗ್ಗೆ ಅರಿವು ಮೂಡಿಸಲಾಯಿತು. ಮಾನಸಿಕ ರೋಗಕ್ಕೆ ಚಿಕಿತ್ಸೆ ಇದೆ. ಮಾತ್ರೆಗಳು ಸತತವಾಗಿ ತೆಗೆದುಕೊಳ್ಳುವುದರಿಂದ ರೋಗವು ಗುಣವಾಗುತ್ತದೆ. ಮಾನಸಿಕ ಕಾಯಿಲೆ ಹೊಂದಿದ್ದ ವ್ಯಕ್ತಿಗಳು ಸಣ್ಣಪುಟ್ಟ ಕೆಲಸಗಳಲ್ಲಿ ತೊಡಗಿರಬೇಕು ಎಂದು ತಿಳಿಸಿದರು. ಅದರ ಜೊತೆಗೆ ಕ್ಯಾನ್ಸರ್ ಕಾಯಿಲೆಯೂ ಹೇಗೆ ಬರುತ್ತದೆ ಮತ್ತು ಅದನ್ನು ಪತ್ತೆ ಹಚ್ಚುವ ವಿಧಾನವನ್ನು ತಿಳಿಸಲಾಯಿತು. ಮದ್ಯಪಾನ ಮತ್ತು ಧೂಮಪಾನದಿಂದ ಕ್ಯಾನ್ಸರ್ ಹುಟ್ಟುತ್ತದೆ ನಾವು ಹಸಿ ತರಕಾರಿ ತಿನ್ನುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು. ಅಂದಾಗ ಮಾತ್ರ ನಮ್ಮ ಆರೋಗ್ಯವು ಚೆನ್ನಾಗಿರುತ್ತದೆ. ಮತ್ತು ಯಾವುದೆ ಚಟಗಳಿಗೆ ಒಳಗಾಗದೆ, ಸರಿಯಾಗಿ ಚಿಕಿತ್ಸೆ ಪಡೆದುಕೊಂಡರೆ ಹಂತ ಹಂತವಾಗಿ ಅವರ ಕಾಯಿಲೆಯು ಗುಣವಾಗುತ್ತದೆ ಎಂದು ಹೇಳಲಾಯಿತು. ಈ ಜಾಗ್ರತಿ ಕಾರ್ಯಕ್ರಮದಲ್ಲಿ ಒಟ್ಟು 96 ಶಾಲಾ ಮಕ್ಕಳು ಮತ್ತು ಸಹ ಶಿಕ್ಷಕರು ಉಪಸ್ಥಿತರಿದ್ದರು.

## "ಅಂಗನವಾಡಿ ಕಾರ್ಯಕರ್ತರಿಗೆ ಮಾನಸಿಕ ಅಸ್ವಸ್ಥತೆಯ ಕುರಿತು ತರಬೇತಿ"




25 ಮಾರ್ಚ್ 2025ರಂದು ಬಸವಕಲ್ಯಾಣ ತಾಲೂಕಿನ ಮೂಡಬಿ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಲಿವ್,ಲವ್,ಲಾಫ್ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ಅಂಗನವಾಡಿ ಕಾರ್ಯಕರ್ತರಿಗೆ ಶ್ರೀಮತಿ ಸುಜಾತ ಅವರು ಮಾನಸಿಕ ಆರೋಗ್ಯ ಮತ್ತು ಮಾನಸಿಕ ಅಸ್ವಸ್ಥತೆ ಕುರಿತು ತರಬೇತಿ ನೀಡಿದರು. ಈ ತರಬೇತಿಯ ಪ್ರಮುಖ ಅಂಶಗಳು: ಮಾನಸಿಕ ಅಸ್ವಸ್ಥತೆ ಎಂದರೇನು, ಮಾನಸಿಕ ಅಸ್ವಸ್ಥತೆಯ ಲಕ್ಷಣಗಳು, ಮಾನಸಿಕ ಅಸ್ವಸ್ಥತೆಯ ಕಾರಣಗಳು, ಮಾನಸಿಕ ಕಾಯಿಲೆಯ ಬಗ್ಗೆ ಜನರಲ್ಲಿರುವ ಮೂಢನಂಬಿಕೆಯನ್ನು ನಾವು ಹೋಗಲಾಡಿಸಬೇಕು. ಮತ್ತು ಮಾನಸಿಕ ಕಾಯಿಲೆಯು ಒಂದು ಮೆದುಳಿನ ಕಾಯಿಲೆಯಾಗಿದ್ದು, ಈ ಕಾಯಿಲೆಗೆ ಚಿಕಿತ್ಸೆಯೂ ಇದೆ, ಸತತವಾಗಿ ಪ್ರಯತ್ನ ಇದ್ದರೆ ಮಾನಸಿಕ ಕಾಯಿಲೆಯಿಂದ ನಾವು ಹೊರಬರುವ ಸಾಧ್ಯತೆ ಇದೆ. ಎಂಬುದರ ವಿಷಯಗಳ ಕುರಿತು ತರಬೇತಿ ನೀಡಿದರು. ಈ ತರಬೇತಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಮುಖ್ಯ ಆಡಳಿತ ವೈದ್ಯಾಧಿಕಾರಿ, ಸುಪ್ರೀಜ ಮತ್ತು ಅಂಗನವಾಡಿ ಕಾರ್ಯಕರ್ತರು ಸೇರಿ ಒಟ್ಟು 47 ಜನ ಭಾಗವಹಿಸಿದ್ದರು.

ವರದಿಗಾರರು: ಸುಜಾತ

## "ಎ.ಡಿ.ಎಲ್.ಎಸ್ ದೈನಂದಿನ ಚಟುವಟಿಕೆಗಳ ಕುರಿತು ತರಬೇತಿ"



ದಿನಾಂಕ 05 2025 ರಂದು ಬಸವಕಲ್ಯಾಣ್ ತಾಲೂಕಿನ ಹುಲಗುತ್ತಿ ಗ್ರಾಮದಲ್ಲಿ ಎ.ಡಿ.ಎಲ್.ಎಸ್ ದೈನಂದಿನ ಚಟುವಟಿಕೆಗಳ ಕುರಿತು ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದ ಉದ್ದೇಶವು ಮಾನಸಿಕ ಅಶ್ವಸ್ಥತೆಗೆ ಒಳಗಾದ ವ್ಯಕ್ತಿಗಳ ಪಾಲಕ ಪೋಷಕರಿಗೆ ಯಾವ ರೀತಿ ಫಲಾನುಭವಿಗಳನ್ನು ನೋಡಿಕೊಳ್ಳಬೇಕು ಎಂಬುದರ ಬಗ್ಗೆ ಮಾಹಿತಿ ನೀಡಲಾಯಿತು. ಮಾನಸಿಕ ಅಶ್ವಸ್ಥತೆಗೆ ಒಳಗಾದ ವ್ಯಕ್ತಿಗಳನ್ನು ನಾವು ಪ್ರೀತಿ ವಿಶ್ವಾಸದಿಂದ ಅವರಿಗೆ ದಿನನಿತ್ಯದ ಕೆಲಸಗಳಾದ ಬ್ರಷ್ ಮಾಡುವುದು, ಸ್ನಾನ ಮಾಡುವುದು, ತಲೆ ಬಾಚಿಕೊಳ್ಳುವುದು, ಊಟ ಮಾಡುವುದು ಮತ್ತು ಸರಿಯಾದ ಸಮಯಕ್ಕೆ ಮಾತ್ರೆಗಳನ್ನು ಸೇವಿಸುವುದು ಹೀಗೆ ಅನೇಕ ರೀತಿಯ ಕೆಲಸಗಳನ್ನು ತಾನಾಗಿಯೇ ಮಾಡಿಕೊಳ್ಳುವಂತೆ ಪಾಲಕರು ಫಲಾನುಭವಿಗಳಿಗೆ ತಿಳಿಸುವಂತದು. ಹೀಗೆ ಮಾಡುವುದರಿಂದ ಅವರು ಮಾನಸಿಕ ಕಾಯಿಲೆಯಿಂದ ಸ್ವಲ್ಪ ಸ್ವಲ್ಪ ಹೊರ ಬರುವಂತೆ ಪ್ರಯತ್ನಿಸುತ್ತಾರೆ. ಈ ಕಾರ್ಯಕ್ರಮದ ಉದ್ದೇಶವು ಮಾನಸಿಕ ಕಾಯಿಲೆ ಹೊಂದಿದ್ದ ವ್ಯಕ್ತಿಗಳು ತನ್ನ ಕೆಲಸ ತಾನಾಗಿಯೇ ಮಾಡಿಕೊಳ್ಳುವುದರಿಂದ ಅವರು ನನಗೆ ಕಾಯಿಲೆ ಇದೆ ಎಂಬುದನ್ನೇ ಮರೆತು ಹೋಗುತ್ತಾರೆ. ಹೀಗೆ ಮಾಡುವುದರಿಂದ ಅವರು ಮಾನಸಿಕ ಕಾಯಿಲೆಯಿಂದ ಸಂಪೂರ್ಣ ಗುಣಮುಖರಾಗಬೇಕೆಂಬುದೇ ನಮ್ಮ ಸಂಸ್ಥೆಯ ಮುಖ್ಯ ಉದ್ದೇಶವಾಗಿದೆ ಎಂದು ಅಮರ್ ರವರು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 15 ಜನರು ಬಾಗವಹಿಸಿದ್ದರು.

ವರದಿಗಾರರು: ಸುಜಾತ

## "ಅಂಗನವಾಡಿ ಕಾರ್ಯಕರ್ತೆಯರಿಗೆ ಸಹಭಾಗಿತ್ವದಾರರ ತರಬೇತಿ ಕಾರ್ಯಕ್ರಮ"



ಮಾರ್ಚ್ 25 2025ರಂದು ಬಸವಕಲ್ಯಾಣ ತಾಲೂಕಿನ ಧನುರ್(ಕೆ) ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ "ಅಂಗನವಾಡಿ ಕಾರ್ಯಕರ್ತೆಯರಿಗೆ ಸಹಭಾಗಿತ್ವದಾರರ ತರಬೇತಿಯನ್ನು" ಆರ್ಬಿಟ್ ಸಂಸ್ಥೆಯ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಸಂಯುಕ್ತ ಆಶ್ರಯದಲ್ಲಿ ನಡೆಸಲಾಯಿತು. ಈ ತರಬೇತಿಯಲ್ಲಿ ಶ್ರೀ ವಿಜಯಕುಮಾರ್ ಅವರು ಮಾತನಾಡಿ, ಮಾನಸಿಕ ಆರೋಗ್ಯ ಕುರಿತು, ಕಾರ್ಯಗಾರವನು ಉದ್ದೇಶಿಸಿ ಮಾತನಾಡುತ್ತಾ, ಮಾನಸಿಕ ಆರೋಗ್ಯ ಎಂದರೇನು? ಮಾನಸಿಕ ಅಸ್ವಸ್ಥರ ಲಕ್ಷಣಗಳು ಮತ್ತು ಈ ರೋಗಕ್ಕೆ ಕಾರಣಗಳು ತಿಳಿಸಿ, ಇಂಥವರನ್ನು ಪ್ರಾಥಮಿಕವಾಗಿ ಪತ್ತೆ ಹಚ್ಚಿ ಅವರನ್ನು ಜಿಲ್ಲಾ ಮಾನಸಿಕ ಆರೋಗ್ಯ ಶಿಬಿರದಲ್ಲಿ ಮನೋವೈದ್ಯ ರಿಂದ ಉಚಿತ ತಪಾಸಣೆ ಹಾಗೂ ಔಷಧೀಗಳು, ಆಪ್ತ ಸಮಾಲೋಚನೆ ನಡೆಸಿ, ಸತತವಾಗಿ ಮಾತ್ರೆಗಳು ತೆಗೆದುಕೊಳ್ಳುವುದರಿಂದ ಮಾನಸಿಕ ಕಾಯಿಲೆಯ ಲಕ್ಷಣಗಳು ಕಡಿಮೆಯಾಗಿ, ತಮ್ಮ ಹಿಂದಿನ ಜೀವನಕ್ಕೆ ತಿರುಗಿರುವ ಅನೇಕ ಜನರ ಯಶಸ್ವಿನ ಕಥೆಗಳು ಹೊಂದಿದ್ದೇವೆ. ಮುಂದಿನ ದಿನಗಳಲ್ಲಿ ಈ ಯೋಜನೆಯು ಆರ್ಬಿಟ್ ಸಂಸ್ಥೆಯು ಸಲ್ಲಿಸುವ ಸೇವೆ ನಿಂತರು ಸಹ ತಾವುಗಳು ಈ ಕಾರ್ಯಕ್ರಮ ಮುಂದುವರಿಸಿಕೊಳ್ಳಬೇಕು ಎಂಬ ಉದ್ದೇಶದಿಂದ ಈ ಕಾರ್ಯಗಾರವನು ಹಮ್ಮಿಕೊಳ್ಳಲಾಗಿದೆ. ಈ ತರಬೇತಿಯಲ್ಲಿ ಅಂಗನವಾಡಿ ಮೇಲ್ವಿಚಾರಕರು ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಒಟ್ಟು ಸೇರಿ 52 ಜನರು ಭಾಗವಹಿಸಿದರು.

ವರದಿಗಾರರು: ವಿಜಯಕುಮರ

## “ಅಂಗನವಾಡಿ ಕಾರ್ಯಕರ್ತೆಯರಿಗೆ ಸಹಭಾಗಿತ್ವದಾರರ ತರಬೇತಿ ಕಾರ್ಯಕ್ರಮ”



ದಿನಾಂಕ 26 ಮಾರ್ಚ್ 2025ರಂದು ಬಸವಕಲ್ಯಾಣ ತಾಲೂಕಿನ ಮಂಠಳ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ಸಹ ಭಾಗಿತ್ವದಾರರ ತರಬೇತಿಯನ್ನು ಆರ್ಬಿಟ್ ಸಂಸ್ಥೆಯ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಸಂಯುಕ್ತ ಆಶ್ರಮದಲ್ಲಿ ನಡೆಸಲಾಯಿತು. ಶ್ರೀಮತಿ ಸುಜಾತ ಮತ್ತು ಶ್ರೀ ವಿಜಯಕುಮಾರ್ ಅವರು ಮಾತನಾಡಿ ಮಾನಸಿಕ ಆರೋಗ್ಯ ಕುರಿತು ಕಾರ್ಯಗಾರರನ್ನು ಉದ್ದೇಶಿಸಿ ಮಾತನಾಡುತ್ತಾ ಮಾನಸಿಕ ಆರೋಗ್ಯ ಎಂದರೇನು, ಮಾನಸಿಕ ಅಸ್ವಸ್ಥರ ಲಕ್ಷಣಗಳು ಮತ್ತು ರೋಗಕ್ಕೆ ಕಾರಣಗಳು ತಿಳಿಸಿ ಇಂತಹವರನ್ನು ಪ್ರಾಥಮಿಕ ಹಂತದಲ್ಲಿ ಪತ್ತೆ ಹಚ್ಚಿ ಅವರನ್ನು ಜಿಲ್ಲಾ ಮಾನಸಿಕ ಆರೋಗ್ಯ ಶಿಬಿರದಲ್ಲಿ ಮನೋವೈದ್ಯರಿಂದ ಉಚಿತ ತಪಾಸಣೆ ಹಾಗೂ ಔಷಧಿಗಳು ಆಪ್ತ ಸಮಾಲೋಚನೆ ನಡೆಸಿ, ಸತತವಾಗಿ ಮಾತ್ರೆಗಳು ತೆಗೆದುಕೊಳ್ಳುವುದರಿಂದ ಮಾನಸಿಕ ಕಾಯಿಲೆಯು ಹಂತ ಹಂತವಾಗಿ ಕಡಿಮೆ ಆಗುತ್ತಾ ಬರುತ್ತದೆ, ತಮ್ಮ ಜೀವನದಲ್ಲಿ ಬದಲಾವಣೆಯನ್ನು ಕಾಣುತ್ತಾರೆ, ಮಾನಸಿಕ ಕಾಯಿಲೆಗೆ ಒಳಗಾದ ವ್ಯಕ್ತಿಯು ಸಣ್ಣ ಸಣ್ಣ ಕೆಲಸಗಳಲ್ಲಿ ತೊಡಗಿರಬೇಕು. ಹೀಗೆ ಮಾಡುವುದರಿಂದ ಅವರು ಎಲ್ಲರಂತೆ ಸಮಾಜದಲ್ಲಿ ಸಂತೋಷದಿಂದ ಜೀವನವನ್ನು ನಡೆಸುತ್ತಿರುತ್ತಾರೆ. ಮತ್ತು ನಮ್ಮ ಆರ್ಬಿಟ್ ಸಂಸ್ಥೆಯು ಸಲ್ಲಿಸುವ ಸೇವೆ ನಿಂತರು ಸಹ ತಾವುಗಳು ಈ ಕಾರ್ಯಕ್ರಮ ಮುಂದುವರಿಸಿಕೊಳ್ಳಬೇಕು ಎಂಬ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ, ಈ ತರಬೇತಿಯಲ್ಲಿ ಅಂಗನವಾಡಿ ಮೇಲ್ವಿಚಾರಕರು ಹಾಗೂ ಮುಖ್ಯ ವೈದ್ಯಾಧಿಕಾರಿ ಮತ್ತು ಅಂಗನವಾಡಿ ಕಾರ್ಯಕರ್ತರು ಒಟ್ಟು ಸೇರಿ 62 ಜನರು ಭಾಗವಹಿಸಿದ್ದರು. ವರದಿಗಾರರು: ಸುಜಾತಾ

## “ನರೇಗಾ ಯೋಜನೆಯ ಫಲಾನುಭವಿಗಳಿಗೆ ಮಾನಸಿಕ ಆರೋಗ್ಯ ಕುರಿತು ಜಾಗೃತಿ”



3 ಮಾರ್ಚ್ 2025 ರಂದು ಬಸವಕಲ್ಯಾಣ ತಾಲೂಕಿನ ಇಸ್ಲಾಂಪುರ ಗ್ರಾಮದ ನರೇಗಾ ಯೋಜನೆಯ ಫಲಾನುಭವಿಗಳಿಗೆ ಮಾನಸಿಕ ಆರೋಗ್ಯ ಕುರಿತು ಜಾಗೃತಿ ಕಾರ್ಯಕ್ರಮವನ್ನು ಆರ್ಬಿಟ್ ಸಂಸ್ಥೆಯ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಸಂಯುಕ್ತ ಆಶ್ರಯದಲ್ಲಿ ನಡೆಸಲಾಯಿತು. ಈ ಕಾರ್ಯಕ್ರಮದಲ್ಲಿ ಶ್ರೀ ವಿಜಯಕುಮಾರ್ ಅವರು ಮಾತನಾಡಿ ಮಾನಸಿಕ ಆರೋಗ್ಯ ಎಂದರೇನು? ಮಾನಸಿಕ ಅಸ್ವಸ್ಥರ ಲಕ್ಷಣಗಳು ಮತ್ತು ಈ ಕಾಯಿಲೆಗೆ ಕಾರಣಗಳು ತಿಳಿಸಿ, ಇಂಥವರನ್ನು ಪ್ರಾಥಮಿಕವಾಗಿ ಪತ್ತೆ ಹಚ್ಚಿ ಜಿಲ್ಲಾ ಮಾನಸಿಕ ಆರೋಗ್ಯ ಶಿಬಿರದಲ್ಲಿ ಮನೋ ತಜ್ಞರಿಂದ ಉಚಿತವಾದ ತಪಾಸಣೆ ಹಾಗೂ ಚಿಕಿತ್ಸೆಯ ಸೌಲಭ್ಯ ವ್ಯವಸ್ಥೆಯೂ ಇರುತ್ತದೆ. ಈ ರೋಗದ ಬಗ್ಗೆ ಹಳ್ಳಿಗಳ ಜನರಲ್ಲಿ ಇರುವ ಮೂಢನಂಬಿಕೆ ಕುರಿತು ಮಾಹಿತಿ ನೀಡಲಾಯಿತು. ವೈಜ್ಞಾನಿಕವಾದ ಚಿಕಿತ್ಸೆಗೆ ಸ್ಪಂದಿಸಿದ ಅನೇಕರು ಗುಣಮುಖರಾಗಿದ್ದಾರೆ. ಸುಮಾರು ಎರಡು ವರ್ಷಗಳಿಂದ ಆರ್ಬಿಟ್ ಸಂಸ್ಥೆಯೂ ಮಾನಸಿಕ ಅಸ್ವಸ್ಥರ ಮಧ್ಯದಲ್ಲಿ ನಿಸ್ವಾರ್ಥವಾಗಿ ಸೇವೆ ಮಾಡುತ್ತಿದೆ. ಈ ಕಾರ್ಯಕ್ರಮದಲ್ಲಿ ಪಂಚಾಯತ್ ಅಧಿಕಾರಿಗಳು ಹಾಗೂ ನರೇಗಾ ಯೋಜನೆಯ ಫಲಾನುಭವಿಗಳು ಒಟ್ಟು ಸೇರಿ 28 ಜನರು ಭಾಗವಹಿಸಿದರು.

ವರದಿಗಾರರು: ವಿಜಯಕುಮಾರ್

## “ಅಂಗನವಾಡಿ ಕಾರ್ಯಕರ್ತೆಯರಿಗೆ ಸಹಭಾಗಿತ್ವದಾರರ ತರಬೇತಿ ಕಾರ್ಯಕ್ರಮ”



ದಿನಾಂಕ 27 ಮಾರ್ಚ್ 2025ರಂದು ಬಸವಕಲ್ಯಾಣ ತಾಲೂಕಿನ ಘೋಟಲ್ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ, ಅಂಗನವಾಡಿ ಕಾರ್ಯಕರ್ತೆಯರಿಗೆ ಸಹ ಭಾಗಿತ್ವದಾರರ ತರಬೇತಿಯನ್ನು ಆರ್ಬಿಟ್ ಸಂಸ್ಥೆಯ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಸಂಯುಕ್ತ ಆಶ್ರಮದಲ್ಲಿ ನಡೆಸಲಾಯಿತು ಶ್ರೀ ಆಕಾಶ್ ಮತ್ತು ವಿಜಯಕುಮಾರ್ ಅವರು ಮಾತನಾಡಿ ಮಾನಸಿಕ ಆರೋಗ್ಯ ಕುರಿತು ಕಾರ್ಯಗಾರರನ್ನು ಉದ್ದೇಶಿಸಿ ಮಾತನಾಡುತ್ತಾ ಮಾನಸಿಕ ಆರೋಗ್ಯ ಎಂದರೇನು, ಮಾನಸಿಕ ಅಸ್ವಸ್ಥರ ಲಕ್ಷಣಗಳು ಮತ್ತು ರೋಗಕ್ಕೆ ಕಾರಣಗಳು ತಿಳಿಸಿ ಇಂತಹವರನ್ನು ಪ್ರಾಥಮಿಕ ಹಂತದಲ್ಲಿ ಪತ್ತೆ ಹಚ್ಚಿ ಅವರನ್ನು ಜಿಲ್ಲಾ ಮಾನಸಿಕ ಆರೋಗ್ಯ ಶಿಬಿರದಲ್ಲಿ ಮನು ವೈದ್ಯರಿಂದ ಉಚಿತ ತಪಾಸಣೆ ಹಾಗೂ ಔಷಧಿಗಳು ಆಪ್ತ ಸಮಾಲೋಚನೆ ನಡೆಸಿ, ಸತತವಾಗಿ ಮಾತ್ರೆಗಳು ತೆಗೆದುಕೊಳ್ಳುವುದರಿಂದ ಮಾನಸಿಕ ಕಾಯಿಲೆಯು ಹಂತ ಹಂತವಾಗಿ ಕಡಿಮೆ ಆಗುತ್ತಾ ಬರುತ್ತದೆ, ತಮ್ಮ ಜೀವನದಲ್ಲಿ ಬದಲಾವಣೆಯನ್ನು ಕಾಣುತ್ತಾರೆ, ಮಾನಸಿಕ ಕಾಯಿಲೆಗೆ ಒಳಗಾದ ವ್ಯಕ್ತಿಯು ಸಣ್ಣ ಸಣ್ಣ ಕೆಲಸಗಳಲ್ಲಿ ತೊಡಗಿರಬೇಕು. ಹೀಗೆ ಮಾಡುವುದರಿಂದ ಅವರು ಎಲ್ಲರಂತೆ ಸಮಾಜದಲ್ಲಿ ಸಂತೋಷದಿಂದ ಜೀವನವನ್ನು ನಡೆಸುತ್ತಿರುತ್ತಾರೆ. ಮತ್ತು ನಮ್ಮ ಆರ್ಬಿಟ್ ಸಂಸ್ಥೆಯು ಸಲ್ಲಿಸುವ ಸೇವೆ ನಿಂತರು ಸಹ ತಾವುಗಳು ಈ ಕಾರ್ಯಕ್ರಮ ಮುಂದುವರಿಸಿಕೊಳ್ಳಬೇಕು ಎಂಬ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ, ಈ ತರಬೇತಿಯಲ್ಲಿ ಅಂಗನವಾಡಿ ಮೇಲ್ವಿಚಾರಕರು ಹಾಗೂ ಮುಖ್ಯ ವೈದ್ಯಾಧಿಕಾರಿ ಮತ್ತು ಅಂಗನವಾಡಿ ಕಾರ್ಯಕರ್ತರು ಒಟ್ಟು ಸೇರಿ 42 ಜನರು ಭಾಗವಹಿಸಿದರು. ವರದಿಗಾರರು: ಆಕಾಶ್

## “ಆಶಾ ಕಾರ್ಯಕರ್ತೆಯರಿಗೆ ಮಾನಸಿಕ ಆರೋಗ್ಯ ಮತ್ತು ಮಾನಸಿಕ ಅಸ್ವಸ್ಥತೆಯ ಕುರಿತು ತರಬೇತಿ”



ದಿನಾಂಕ 24 ಮಾರ್ಚ್ 2025ರಂದು ಬೀದರ ತಾಲೂಕಿನ ಆಣದೂರ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ನವಜೀವವ ಲಿವ್,ಲವ್,ಲಾಫ್ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ಆಶಾ ಕಾರ್ಯಕರ್ತೆಯರಿಗೆ ಶ್ರೀ ಆನಂದರವರು ಮಾನಸಿಕ ಆರೋಗ್ಯ ಮತ್ತು ಮಾನಸಿಕ ಅಸ್ವಸ್ಥತೆಯ ಕುರಿತು ತರಬೇತಿ ನೀಡಿದರು. ತರಬೇತಿಯ ಪ್ರಮುಖ ಅಂಶಗಳು: ಆರೋಗ್ಯ ಎಂದರೇನು? ಮಾನಸಿಕ ಆರೋಗ್ಯ ಎಂದರೇನು? ಮಾನಸಿಕ ಅಸ್ವಸ್ಥತೆ ಎಂದರೇನು? ಮಾನಸಿಕ ಕಾಯಿಲೆ ಲಕ್ಷಣಗಳು ಮತ್ತು ಚಿಕಿತ್ಸೆ ಮಾನಸಿಕ ಅಸ್ವಸ್ಥತೆಯ ಕುರಿತು ಇರುವ ಕಳಂಕ ತಾರತಮ್ಯ ಮತ್ತು ಮೂಢನಂಬಿಕೆ. ಆರಂಭಿಕ ಮಧ್ಯಸ್ಥಿಕೆಯ ಪ್ರಾಮುಖ್ಯತೆ, ಮಾನಸಿಕ ಅಸ್ವಸ್ಥತೆಯ ಲಕ್ಷಣಗಳನ್ನು ಗುರುತಿಸುವುದು, ಉಲ್ಲೇಖಿತ ಮಾರ್ಗಗಳು, ಬಾಂಧವ್ಯವನ್ನು ನಿರ್ಮಿಸುವುದು, ಸಕ್ರಿಯ ಆಲಿಸುವಿಕೆ, ಸಮುದಾಯ ಸಂಪನ್ಮೂಲಗಳು, ಆಪ್ತ ಸಮಾಲೋಚನೆಯ ವಿಧಾನ, ಸಮುದಾಯ ಜಾಗೃತಿ ಹಾಗೂ ಒತ್ತಡ ನಿರ್ವಹಣೆ ಮುಂತಾದ ವಿಷಯಗಳ ಕುರಿತು ತರಬೇತಿ ನೀಡಿದರು. ಈ ತರಬೇತಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಮುಖ್ಯ ಆಡಳಿತ ವೈದ್ಯಾಧಿಕಾರಿ, ಸಮುದಾಯ ಆರೋಗ್ಯ ಅಧಿಕಾರಿಗಳು, ಆರೋಗ್ಯ ನಿರೀಕ್ಷಣಾಧಿಕಾರಿಗಳು, ಮತ್ತು ಆಶಾ ಕಾರ್ಯಕರ್ತೆಯರು ಸೇರಿ ಒಟ್ಟು 40 ಜನ ಭಾಗವಹಿಸಿದ್ದರು. ವರದಿಗಾರರು: ಆನಂದ

## “ಆಶಾ ಕಾರ್ಯಕರ್ತೆಯರಿಗೆ ಸಹಭಾಗಿತ್ವದಾರರ



ಮಾರ್ಚ್ 26 2025ರಂದು ಭಾಲ್ಕಿ ತಾಲೂಕ ಆರೋಗ್ಯ ಕೇಂದ್ರ ಹೊರಾಂಗಣದಲ್ಲಿ ಆಶಾ ಕಾರ್ಯಕರ್ತೆಯರಿಗೆ ಸಹಭಾಗಿತ್ವದಾರರ ತರಬೇತಿಯನ್ನು ಆರ್ಬಿಟ್ ಸಂಸ್ಥೆಯ ನವಜೀವನ ಎಲ್.ಎಲ್.ಎಲ್.ಎಫ್ ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಯಿತು. ಈ ತರಬೇತಿಯಲ್ಲಿ ಕುಮಾರ್ ಮತ್ತು ಪ್ರದೀಪ ಅವರು ಮಾತನಾಡಿ, ಮಾನಸಿಕ ಆರೋಗ್ಯ ಕುರಿತು ಮಾಹಿತಿ ನೀಡಿದರು. ಮಾನಸಿಕ ಕಾಯಿಲೆಯ ಲಕ್ಷಣಗಳು ಮತ್ತು ಕಾಯಿಲೆಯ ಕಾರಣಗಳು ತಿಳಿಸಿದರು, ಇಂಥವರನ್ನು ಪ್ರಾಥಮಿಕವಾಗಿ ಪತ್ತೆ ಹಚ್ಚಿ, ಜಿಲ್ಲಾ ಮಾನಸಿಕ ಆರೋಗ್ಯ ಶಿಬಿರದಲ್ಲಿ ಮನೋವೈದ್ಯರಿಂದ ಉಚಿತ ತಪಾಸಣೆ ಹಾಗೂ ಚಿಕಿತ್ಸೆಯ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಲಾಯಿತು. ಈ ರೋಗದ ಬಗ್ಗೆ ಹಳ್ಳಿ ಜನರಲ್ಲಿ ಇರುವ ಮೂಢನಂಬಿಕೆಯ ಪಿಡುಗು ಹೋಗಲಾಡಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ವೈಜ್ಞಾನಿಕವಾದ ಚಿಕಿತ್ಸೆಗೆ ಸಂದಿಸುವಂತೆ ಅರಿವು ಮೂಡಿಸುವುದು. ಮುಂದಿನ ದಿನಗಳಲ್ಲಿ ಈ ಯೋಜನೆಯು ಸಂಸ್ಥೆಯಿಂದ ನಿಂತರು ಸಹ ತಾವುಗಳು ಮುಂದುವರಿಸಿಕೊಳ್ಳಬೇಕು ಎಂಬ ಉದ್ದೇಶದಿಂದ ಇಂತಹ ತರಬೇತಿಗಳು ನಿಮಗೆ ಆಯೋಜಿಸಲಾಗುತ್ತಿದೆ ಎಂದು ತಿಳಿಸಿದರು. ಈ ತರಬೇತಿ ಕಾರ್ಯಾಗಾರದಲ್ಲಿ ಆಶಾ ಕಾರ್ಯಕರ್ತೆಯರು ಆರೋಗ್ಯ ಅಧಿಕಾರಿಗಳು ಒಟ್ಟು 28 ಜನರು ಭಾಗವಹಿಸಿದರು. ವರದಿಗಾರರು: ಕುಮಾರ್

## “ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮ”



ಮಾರ್ಚ್ 27 2025ರಂದು ಭಾಲ್ಕಿ ತಾಲೂಕಿನ ಖಾಶಾಂಪೂರ್ ಗ್ರಾಮದಲ್ಲಿ ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಮೂಡಿಸಲಾಯಿತು. ಈ ಜಾಗೃತಿ ಕಾರ್ಯಕ್ರಮದ ಆರ್ಬಿಟ್ ಸಂಸ್ಥೆಯ ಎಲ್.ಎಲ್.ಎಲ್.ಎಫ್ ಕಾರ್ಯಕರ್ತರಾದ ಶ್ರೀ ಪ್ರದೀಪ್ ಅವರು ಮಾತನಾಡಿ, ಒಬ್ಬ ವ್ಯಕ್ತಿಗೆ ಮಾನಸಿಕ ರೋಗ ಹೇಗೆ ಬರುತ್ತದೆ ಎಂಬುದಾಗಿ ವಿವರಿಸಲಾಯಿತು. ಅಂದರೆ ಒಬ್ಬ ವ್ಯಕ್ತಿಯ ಜೀವನದಲ್ಲಿ ಆದಂತ ಕಹಿ ಘಟನೆಯನ್ನು ಪುನಃ ಪುನಃ ನೆನಪು ಮಾಡಿ ಖಿನ್ನತೆಗೆ ಒಳಗಾಗಿ ಮಾನಸಿಕ ರೋಗಕ್ಕೆ ತುತ್ತಾಗಿರುತ್ತಾನೆ. ಈ ರೋಗವು ಒಂದು ಮೆದುಳಿನ ರೋಗ, ಮೆದುಳಿನಲ್ಲಿ ಇರುವಂತಹ ರಾಸಾಯನಿಕ ಕ್ರಿಯೆಗಳಲ್ಲಿ ಬದಲಾವಣೆ ಉಂಟಾದಾಗ ಅಥವಾ ಏರುಪೇರು ಉಂಟಾದಾಗ ಮನುಷ್ಯನು ಈ ರೋಗಕ್ಕೆ ತುತ್ತಾಗುತ್ತಾನೆ. ಈ ರೋಗದ ಲಕ್ಷಣಗಳೆಂದರೆ ವಿನಾಕಾರಣ ಅಳುವುದು, ವಿನಾಕಾರಣ ನಗುವುದು, ಬೀದಿ ಸುತ್ತುವುದು, ಚಿಕ್ಕ ಚಿಕ್ಕ ವಸ್ತುಗಳನ್ನು ಸಂಗ್ರಹಿಸುವುದು, ಅನುಮಾನ ಪಡುವುದು, ಕೋಪ ಮಾಡಿಕೊಳ್ಳುವುದು, ಯಾರಿಗೆ ಕೇಳಿಸಲಾರದಂತ ಶಬ್ದವನ್ನು ಕೇಳಿಸುವುದು, ಮುಂತಾದ ಲಕ್ಷಣಗಳು ಕಂಡುಬರುತ್ತವೆ. ಈ ಲಕ್ಷಣಗಳು ಕಂಡು ಬಂದರೆ ವೈದ್ಯರ ಸಲಹೆ ಪಡೆಯುವುದು ಎಂದು ಸಲಹೆ ನೀಡಲಾಯಿತು. ತಿಂಗಳಿನ ಎರಡನೇ ಮಂಗಳವಾರ ಭಾಲ್ಕಿ ಸಾರ್ವಜನಿಕ ಆಸ್ಪತ್ರೆಯೆಲ್ಲಿ ಜಿಲ್ಲಾ ಮಾನಸಿಕ ಶಿಬಿರ ಇರುತ್ತದೆ. ಈ ಶಿಬಿರದಲ್ಲಿ ಬಂದು ಉಚಿತ ಚಿಕಿತ್ಸೆಯನ್ನು ಪಡೆಯಬಹುದು ಅಥವಾ ಇಂಥ ಲಕ್ಷಣ ಇರುವವರಿಗೆ ಕಂಡು ಬಂದರೆ ನಮ್ಮ ಸಂಸ್ಥೆಯ ಸಹಾಯವಾಣಿಯಾದಂತಹ 9036664271 ಕರೆ ಮಾಡಿ ಮಾಹಿತಿ ನೀಡುವುದು ಎಂದು ಜಾಗೃತಿ ಮೂಡಿಸಿದರು. ಈ ಜಾಗೃತಿ ಕಾರ್ಯಕ್ರಮದಲ್ಲಿ ಗ್ರಾಮದ 8 ಜನ ಭಾಗಿಯಾಗಿದ್ದರು.

ವರದಿಗಾರರು: ಪ್ರದೀಪ್

# ಮಹಿಳಾ ಸಬಲೀಕರಣ ಕಾರ್ಯಕ್ರಮ”

## “ಸಂಘದ ಮಹಿಳೆಯರಿಗೆ ಪಂಚಾಯತ್ ರಾಜ್ ವ್ಯವಸ್ಥೆ ಕುರಿತು ತರಬೇತಿ”

25 ಮಾರ್ಚ್ 2025ರಂದು ಹುಮ್ನಾಬಾದ್ ತಾಲೂಕಿನ ಇಂದಿರಾನಗರ ಗ್ರಾಮದ ಜ್ಯೋತಿ ಸಂಘದ ಮಹಿಳೆಯರಿಗೆ ಪಂಚಾಯತ್ ರಾಜ್ ವ್ಯವಸ್ಥೆ ಕುರಿತು ತರಬೇತಿಯನ್ನು ನಡೆಸಲಾಗಿದ್ದು. ಪಂಚಾಯತ್ ರಾಜ್ ಎಂದರೆ. ಅಧಿಕಾರವನ್ನು ವಿಕೇಂದ್ರಿ ಕರಿಸುವಂತದ್ದು ಸಂವಿಧಾನದ ಕಲಂ 243ಚಿ ಇಂದ 243 ವರೆಗೆ ಪಂಚಾಯತ್ ರಾಜ್ ಕುರಿತು ವಿವರಿಸುತ್ತದೆ. ಮೂಲ ಸಂವಿಧಾನದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ಇರಲಿಲ್ಲ ಬದಲಾಗಿ ಸಂವಿಧಾನಕ ತಿದ್ದುಪಡಿ ತರುವುದರ ಮೂಲಕ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಪುನರ್ ಚೇತನಗೊಳಿಸಲಾಯಿತು. ಮೂಲ ಉದ್ದೇಶವೆಂದರೆ ಗ್ರಾಮ ಸ್ವರಾಜ್ಯ ಜನರಲ್ಲಿ ಪ್ರಜಾಪ್ರಭುತ್ವದ ಕುರಿತು ತಿಳಿಸುವುದು. ಆಡಳಿತದ ನಿರ್ವಹಣೆಯಲ್ಲಿ ಜನರ ಸಹಭಾಗಿತ್ವ ಮೂರು ಹಂತಗಳಲ್ಲಿ ಗ್ರಾಮ ಸಭೆ ತಾಲೂಕು ಪಂಚಾಯತ್ ಜಿಲ್ಲಾ ಪಂಚಾಯತ್ ಮೂಲಕ ಆಡಳಿತದ ದೇಶದ ಸರ್ವಾಂಗೀಕರಣ ಅಭಿವೃದ್ಧಿಗಾಗಿ ಕಾಯ್ದೆ ರೂಪಿಸಲಾಗಿದೆ ಎಂದು ಹಲವಾರು ವಿಷಯಗಳನ್ನು ನೀಡುವುದರೊಂದಿಗೆ ಸದಸ್ಯರಿಗೆ ವಾರ್ಡ್ ಸಭೆ ಗ್ರಾಮ ಸಭೆಯಲ್ಲಿ ಭಾಗವಹಿಸಿ ಸಮಸ್ಯೆ ಮತ್ತು ಸೌಕರ್ಯಗಳ ಕುರಿತು ಮಾತನಾಡಬೇಕೆಂದು ತಿಳಿಸಲಾಯಿತು.



ವರದಿಗಾರರು: ಸಬಿತಾ

## “ಸರಕಾರದ ಸೌಲಭ್ಯಗಳನ್ನು ಪಡೆದುಕೊಂಡು ಸುಖಮಯ ಜೀವನ ಮಡೆಸುತ್ತಿರುವ ಮಹಿಳೆ”



ರೇಖಾ ಇವರು ನಿಂಬೂರು ಗ್ರಾಮದ ನಿವಾಸಿತಾಗಿದ್ದು ಸಾವಿತ್ರಿಬಾಯಿ ಫುಲೆ ಸಂಘದ ಸದಸ್ಯರಾಗಿದ್ದಾರೆ. ಇವರಿಗೆ ಮೊದಲು ಯಾವುದೇ ಸರಕಾರದ ಸೌಲಭ್ಯಗಳ ಮಾಹಿತಿ ಇಲ್ಲದ ಸಂದರ್ಭದಲ್ಲಿ ಆರ್ಬಿಟ್ ಸಂಸ್ಥೆಯ ಸಿಬ್ಬಂದಿ ವರ್ಗದವರು ನಿಂಬೂರ್ ಗ್ರಾಮಕ್ಕೆ ಬಂದು ಸಂಘ ಮಾಡುವುದರ ಕುರಿತು ಪರಿಕಲ್ಪನೆ ಮಾಹಿತಿ ತಿಳಿಸಿದರು. ಸಂಘಕ್ಕೆ ಸೇರಿಕೊಂಡು ಹಲವಾರು ತರಬೇತಿಗಳನ್ನು ಪಡೆದುಕೊಳ್ಳಲಾಯಿತು. ಒಂದು ವರ್ಷದಿಂದ ಗಂಡನನ್ನು ಕಳೆದುಕೊಂಡ ನನಗೆ ಸಮಸ್ಯೆಗಳು ಎದುರಾಗಿದ್ದವು. ಆ ಸಂದರ್ಭದಲ್ಲಿ ಲೇಬರ್ ಕಾರ್ಡ್ ಈಶ್ರಮ ಕಾರ್ಡ್ ಆರೋಗ್ಯ ಕಾರ್ಡ್‌ಗಳು ಮಾಡಿಸಿಕೊಂಡಿದ್ದರು ಹಾಗೆಯೇ ಪ್ರಾಥಮಿಕ ಆರೋಗ್ಯ ಕೇಂದ್ರ ಅಂಗನವಾಡಿ ಕೇಂದ್ರ ತಸಿಲ್ದಾರ್ ಕಚೇರಿ ಮತ್ತು ನೆಮ್ಮದಿ ಕೇಂದ್ರ ಭೇಟಿ ನೀಡಿ ಗಂಡನ ಮರಣ ಪ್ರಮಾಣ ಪತ್ರ ಮಾಡಿಸಿಕೊಂಡರು. ತದನಂತರ ರಾಷ್ಟ್ರೀಯ ಭದ್ರತಾ ಯೋಜನೆಯ ಅಡಿಯಲ್ಲಿ ಅರ್ಜಿ ಸಲ್ಲಿಸಿದ ಪರಿಣಾಮವಾಗಿ 20000 ಬಂದಿರುತ್ತದೆ. ಮತ್ತು ವಿಧವಿ ವೇತನಕ್ಕಾಗಿ ಅರ್ಜಿ ಸಲ್ಲಿಸಿದರು. ಇದರ ಪರಿಣಾಮವಾಗಿ ಪ್ರತಿ ತಿಂಗಳು 800 ರೂ ಬರುತ್ತಿದೆ. ಹಾಗೆ ನನಗೆ ಆರೋಗ್ಯ ಸರಿ ಇಲ್ಲದ ಸಂದರ್ಭದಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರು ನನಗೆ ಸ್ಪಂದಿಸಿ ಧೈರ್ಯ ನೀಡಿ ಸಮಾಧಾನಪಡಿಸಿ ಆಸ್ಪತ್ರೆಗೆ ಹೋಗುವಂತೆ ಮಾರ್ಗದರ್ಶನ ನೀಡಿ ಪ್ರತಿ ಸಲ ಫೋನ್ ಮೂಲಕ ನಾನು ಆರೋಗ್ಯವನ್ನು ವಿಚಾರಿಸಿ, ಮನೆಗೆ ಬಂದು ಹೋಗುತ್ತಿದ್ದರು. ಇವಾಗ ನನ್ನ ಆರೋಗ್ಯದಲ್ಲಿ ಸುಧಾರಣೆಯಾಗಿದೆ. ಇಷ್ಟೆಲ್ಲ ಮಾಹಿತಿ ನೀಡಿ ನನ್ನ ಕಷ್ಟಕ್ಕೆ ಸ್ಪಂದಿಸಿ ಸಹಾಯ ಮಾಡಿದಂತ ಅವರು ಆರ್ಬಿಟ್ ಸಂಸ್ಥೆಗೆ ಹೃತ್ಪೂರ್ವಕ ಧನ್ಯವಾದಗಳು ಸಲ್ಲಿಸುತ್ತೇನೆ. ಎಂದು ಶ್ರೀಮತಿ ರೇಖಾ ರವರು ತಿಳಿಸಿರುತ್ತಾರೆ. ವರದಿಗಾರರು: ಅಮೀತಾ

## “ಸಂತ ಆಂಥೋನಿ ಬಾಲ ಕಲ್ಯಾಣ ಆಶ್ರಮ, ಪರ್ತಾಪುರದಲ್ಲಿ ವಿಶ್ವ ಮಹಿಳಾ ದಿನಾಚರಣೆ”



ದಿನಾಂಕ 21 ಮಾರ್ಚ್ 2025ರಂದು ಸಂತ ಆಂಥೋನಿ ಬಾಲ ಕಲ್ಯಾಣ ಆಶ್ರಮ, ಪರ್ತಾಪುರದಲ್ಲಿ ವಿಶ್ವ ಮಹಿಳಾ ದಿನಾಚರಣೆ ಆಚರಿಸಲಾಯಿತು. ಈ ಒಂದು ಕಾರ್ಯಕ್ರಮದಲ್ಲಿ ಕೇಂದ್ರದ ನಿರ್ದೇಶಕರಾದ ಫಾದರ್ ಜಾರ್ಜ್, ಅಡ್ವಕೇಟ್ ಆದ ವಿಜಯಲಕ್ಷ್ಮಿ, ಪಿ.ಎಸ್.ಐ ಅಶ್ವಿನಿ ಮಾನೆ, ಮುಚಳಂಬ ಕೇಂದ್ರದ ಫಾದರ್ ಆರೋಗ್ಯ, ಫಾದರ ಸ್ಟ್ಯಾನಿ ಲೋಬೊ, ಸಂಸ್ಥೆ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್, ಹಾಗೂ ಬ್ರಹ್ಮಕುಮಾರಿಯಾದ ಬಹೆಂಜಿ ರವರು ಹಾಗೂ ಸಿಸ್ಟರ್ ಸ್ಥಳೀಯ ಸಂಯೋಜಕರು ಹಾಗೂ ಸಿಬ್ಬಂದಿ ವರ್ಗದವರು. ಕೇಂದ್ರ ಬಿಂದುಗಳಾದ ಮಹಿಳೆಯರು. ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಅಡ್ವಕೇಟ್ ಆದ ವಿಜಯಲಕ್ಷ್ಮಿ ಹೂಗಾರ್, ಹಾಗೂ ಅಶ್ವಿನಿ ಮೇಡಂ ರವರು ಮಹಿಳೆಯರ ಬಗ್ಗೆ ಮಾತನಾಡಿ ಇಂದಿನ ಮಹಿಳೆಯರು ಇಂದಿನ ಪ್ರಜೆಗಳು ಎನ್ನುತ್ತಾ ಎಲ್ಲಾ ಮಹಿಳೆಯರನ್ನು ಮಹಿಳಾ ದಿನಾಚರಣೆಯ ಶುಭಾಶಯಗಳು ತಿಳಿಸುತ್ತಾ. ಸಂಸ್ಥೆಯು ಮಾಡುತ್ತಿರುವ ನಿಸ್ವಾರ್ಥ ಸೇವೆಯು ನೋಡುವುದಾದರೆ ತುಂಬಾ ಸಂತೋಷವಾಗುತ್ತಿದೆ. ಎಂದು ತಿಳಿಸಿದರು. ಮಹಿಳೆಯರು ಎಲ್ಲಾ ಕ್ಷೇತ್ರದಲ್ಲಿ ಬೆಳೆದು ತಮ್ಮ ಅವಕಾಶಗಳನ್ನು ಪಡೆದುಕೊಳ್ಳಬೇಕು. ತಮ್ಮ ಹಕ್ಕಿನ ಬಗ್ಗೆ ತಾವೇ ಜವಾಬ್ದಾರಿ ತೆಗೆದುಕೊಂಡು ತಮ್ಮ ಮಕ್ಕಳನ್ನು ಉನ್ನತ ಶಿಕ್ಷಣ ಕೊಡುವಲ್ಲಿ ಮುಂದಾಗಬೇಕೆಂದು ತಿಳಿಸಿದರು.

ವರದಿಗಾರರು: ಚಂದ್ರಕಲಾ

## “ಸಮುದಾಯ ಪ್ರೇರಿತ ಅಭಿವೃದ್ಧಿ ವಿಧಾನ ತರಬೇತಿ”




ದಿನಾಂಕ 21 ಮಾರ್ಚ್ 2025ರಂದು ಭಾಲ್ಕಿ ತಾಲೂಕಿನ ಗೋರ್ನಾಳ್ ಗ್ರಾಮದ ಕಿರಣ್ ಜ್ಯೋತಿ ಉಪ ಮಹಾಸಂಗದ ಪದಾಧಿಕಾರಿಗಳಿಗೆ ಹಾಗೂ ಎಲ್ಲಾ ಸದಸ್ಯರಿಗೆ ಸಮುದಾಯ ಪ್ರೇರಿತ ಅಭಿವೃದ್ಧಿ ವಿಧಾನ ತರಬೇತಿಯನ್ನು ಹಮ್ಮಿಕೊಳ್ಳಲಾಯಿತು. ಸಂಸ್ಥೆಯ ಮಹಿಳಾ ಸಬಲೀಕರಣದ ಕಾರ್ಯಕರ್ತರಾದ ಶ್ರೀಮತಿ ಪ್ರಭಾವತಿಯವರು ಗುಂಪಿನ ಸದಸ್ಯರಿಗೆ ಸಮುದಾಯ ಎಂದರೆ ಗುಂಪು ಮತ್ತು ಪ್ರೇರಕ ಎಂದರೆ ಪ್ರಯತ್ನ ಗುಂಪ ಗುಂಪಿನ ಜೊತೆ ಸೇರಿ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಪ್ರಯತ್ನಿಸುವುದು ಮತ್ತು ಅಭಿವೃದ್ಧಿಪಡಿಸುವುದು. ಉದಾಹರಣೆಗೆ ಶೌಚಾಲಯವನ್ನು ಮತ್ತು ಸಿಸಿ ರಸ್ತೆ, ಚರಂಡಿ ಹಾಗೂ ಸಾರ್ವಜನಿಕರ ಸಮುದಾಯವನ್ನು ಒಂದು ಸೌಲಭ್ಯವನ್ನು ಪಡೆಯಲು ನಾವು ಸಮುದಾಯಕವಾಗಿ ಮತ್ತು ಗುಂಪಿನ ಅಭಿವೃದ್ಧಿಯ ಮೂಲಕ ನಾವು ಪ್ರಯತ್ನಿಸುವುದು. ಹೀಗೆ ಸಮುದಾಯ ಪ್ರೇರಿತ ಅಭಿವೃದ್ಧಿ ವಿಧಾನ ಒಂದು ವಿಧಾನದ ಮುಖಾಂತರ ಹೋಗಿದ್ದರೆ ಅದಕ್ಕೆ ಯಾವುದೇ ಸೌಲತ್ತನ್ನು ಪಡೆಯಲು ಸಮುದಾಯ ಪ್ರೇರಿತ ಅಭಿವೃದ್ಧಿಯನ್ನು ಹೊಂದಲು ಸಾಧ್ಯವಾಗುತ್ತದೆ ಮತ್ತು ನಾವು ಅಭಿವೃದ್ಧಿ ಯಾಗಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು. ವರದಿಗಾರರು: ಪ್ರಭಾವತಿ

## “ಮಾನಿನಿ ರಾಜ್ಯ ಒಕ್ಕೂಟ ಪ್ರಥಮ ವಾರ್ಷಿಕೋತ್ಸವ ಕಾರ್ಯಕ್ರಮ”

8 ಮಾರ್ಚ್ 2025ರಂದು ಶಿವಮೊಗ್ಗ ಜಿಲ್ಲೆಯಲ್ಲಿ ಆಯೋಜಿಸಿದ ಮಾನಿನಿ ರಾಜ್ಯ ಒಕ್ಕೂಟ ಪ್ರಥಮ ವಾರ್ಷಿಕೋತ್ಸವದ ಅಂಗವಾಗಿ ಹಮ್ಮಿಕೊಳ್ಳಲಾಗಿರುವ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಹುಮ್ನಾಬಾದ್ ತಾಲೂಕಿನ ಬೀದರ್ ಜಿಲ್ಲೆಯ ಹುಡುಗಿ ಗ್ರಾಮದ ನಿವಾಸಿಯಾಗಿದ್ದ ಶ್ರೀಮತಿ ಸಂಗೀತ ಗಂಡ ವಿನೋದ್ ಇವರನ್ನು ಮಹಿಳಾ ಸಬಲೀಕರಣ ಯೋಜನೆಯ ಅನೇಕ ಕಾರ್ಯಚಟುವಟಿಕೆಗಳಲ್ಲಿ ಅಂದರೆ ಸಣ್ಣ ಉಳಿತಾಯದಿಂದ ಸ್ವಾವಲಂಬಿ ಬದುಕು ಮಕ್ಕಳ ಶಿಕ್ಷಣದ ಕಡೆಗೆ ಗಮನ ಸಮುದಾಯದ ಸಮಸ್ಯೆಗಳನ್ನು ಗುರುತಿಸುವಲ್ಲಿ ಪ್ರಯತ್ನ ಹಾಗೂ ಸಮಸ್ಯೆಗಳ ಪರಿಹಾರ ಕಂಡುಕೊಳ್ಳುವುದು ಸಂಘಟನೆ ಬೆಳೆಸುವುದು ಹೇಗೆ ಇತ್ಯಾದಿ ವಿಷಯಗಳಲ್ಲಿ ಸಾಧನೆಗೈದ ಸಾಧಕ ಮಹಿಳೆ ಎಂದು ಗುರುತಿಸಿ ಅವರನ್ನ ಸನ್ಮಾನಿಸಲಾಯಿತು.




ವರದಿಗಾರರು: ಸಬಿತಾ

## “ಅಂತರಾಷ್ಟ್ರಿಯ ಮಹಿಳಾ ದಿನಾಚರಣೆಯ! ಆರ್ಬಿಟ್ ಸಂಸ್ಥೆಯಲ್ಲಿ ಉಚಿತ ಆರೋಗ್ಯ ಮತ್ತು ಕ್ಯಾನ್ಸರ್ ತಪಾಸಣೆ ಶಿಬಿರ ಕಾರ್ಯಕ್ರಮ”




ಹುಮನಾಬಾದ್ ತಾಲೂಕಿನ ಹೊರವಲಯದಲ್ಲಿರುವ ಆರ್ಬಿಟ್ ಸಮಾಜ ಸೇವಾ ಸಂಸ್ಥೆ ಆವರಣದಲ್ಲಿ ದಿನಾಂಕ 18 ಮಾರ್ಚ್ 2025 ರಂದು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಅತಿ ವಿಜ್ರಂಭಣೆಯಿಂದ ಆಚರಿಸಲಾಯಿತು. ಈ ಒಂದು ಸಮಾರಂಭದ ಪ್ರಯುಕ್ತ ಇಂಡಿಯನ್ ಕ್ಯಾನ್ಸರ್ ಸುಸೈಟಿ ಗುಲ್ಬರ್ಗ ಮತ್ತು ಆರ್ಬಿಟ್ ಸಮಾಜ ಸೇವಾ ಸಂಸ್ಥೆ ಹುಮನಾಬಾದ್ ಹಾಗೂ ವೆಲ್ಮೆಗ್ನಾ ಸೈಲೆನ್ಸ್ ಆಸ್ಪತ್ರೆ ಬೀದರ್ ಇವರ ನೇತೃತ್ವದಲ್ಲಿ ಉಚಿತ ಕ್ಯಾನ್ಸರ್ ತಪಾಸಣೆ ಮತ್ತು ಉಚಿತ ಆರೋಗ್ಯ ತಪಾಸಣೆ ಹಾಗೂ ಕಣ್ಣಿನ ತಪಾಸಣೆ ಶಿಬಿರವನ್ನು ಆಯೋಜಿಸಲಾಯಿತು. ಆರೋಗ್ಯವೇ ಭಾಗ್ಯ ಎಂಬುವು ದೈವವಕ್ಯದಂತೆ ಆರೋಗ್ಯವಂತನ್ನು ಏನೆಲ್ಲಾ ಮಾಡಬಹುದು. ಆರೋಗ್ಯವೇ ಸರಿಯಿಲ್ಲದಿದ್ದರೆ ಏನು ಮಾಡಲಿಕೆ ಅಸಾಧ್ಯವಾಗುವಂತದು. ಸಮಾಜದಲ್ಲಿ ಉತ್ತಮ ಜೀವನವನ್ನು ನಡಿಸಬೇಕಾದರೆ ಉತ್ತಮ ಆರೋಗ್ಯವೂ ಬೇಕು. ದೇಹದ ಯಾವುದೇ ಭಾಗದಲ್ಲಿ ಆದರೂ ಗದ್ದೆಗಳು ಹಾಗೂ ನೋವು ಇರಲಾರದೆ ಗಂಟುಗಳು, ದೇಹದಲ್ಲಿ ಬೆವರು ಬಿಡುವುದು, ವಿಪರೀತವಾದ ಜ್ವರ, ದೇಹದ ತೂಕದಲ್ಲಿ ಕುಗ್ಗುವಿಕೆ, ಕೆಮ್ಮುವಾಗ ಬಾಯಿಂದ ಮತ್ತು ಮೂಗಿನಿಂದ ರಕ್ತ ಹೀಗೆ ಹಲವಾರು ರೀತಿಯಲ್ಲಿ ಕ್ಯಾನ್ಸರ್ ಲಕ್ಷಣಗಳು ಕಂಡು ಬರುತ್ತವೆ. ಕ್ಯಾನ್ಸರ್ ಎಂಬುದು ಪ್ರಥಮ ಹಂತದಲ್ಲಿ ಗುರುತಿಸಿ ಸೂಕ್ತ ಚಿಕಿತ್ಸೆಯಿಂದ ಗುಣಮುಖ ಪಡಿಸಬಹುದು. ಮೂರು ಅಥವಾ ಕೊನೆಯ ಹಂತದಲ್ಲಿ ಹೋಗಗುಡಿಸದೆ ಪ್ರಥಮ ದರ್ಜೆಯಲ್ಲಿ ನಿವಾರಣೆ ಮಾಡಬಹುದು ಎಂದು ಡಾ. ಗುರುರಾಜ್ ಕುಲ್ಕರ್ಣಿ ತಿಳಿಸಿದರು. ಈ ಶಿಬಿರದಲ್ಲಿ ಬಿಪಿ, ಶುಗರ್ ಪರಿಸಿಲನೆಮಾಡಿ, ಬಾಯಿ, ಕಣ್ಣು, ಎದೆ ಹಾಗೂ ಹೊಟ್ಟೆ ಹೀಗೆ ದೇಹದ ಎಲ್ಲಾ ಅಂಗಗಳನು ತಪಾಸಣೆ ಮಾಡಲಾಯಿತು. ಡಾ. ಅಶ್ವಿನಿ ಸೈಲೆನ್ಸ್ ಆಸ್ಪತ್ರೆ ಹುಮನಾಬಾದ್, ಆರ್ಬಿಟ್ ಸಂಸ್ಥೆಯ ನಿರ್ದೇಶಕರಾದ ಫಾ. ವಿಕ್ಟರ್ ಅನಿಲ್ ವಾಸ್, ಸಹಾಯಕ ನಿರ್ದೇಶಕರಾದ ಫಾ. ವಿಜಯಕುಮಾರ್, ಸಂಯೋಜಕಾರದ ಶ್ರೀ ಯೋಹಾನ ವಾಲಿ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಈ ಕ್ಯಾನ್ಸರ್ ತಪಾಸಣಾ ಶಿಬಿರದಲ್ಲಿ 70 ಫಲಾನುಭವಿಗಳಿಗೆ ಉಚಿತವಾಗಿ ತಪಾಸಣೆಗೆ ವಲಪಡಿಸಲಾಯಿತು. ವರದಿಗಾರರು: ಯೋಹಾನ್ ವಾಲಿ



## "ಜನಜಾಗ್ರತಿ ತಾಲೂಕ ಒಕ್ಕೂಟ ಭಾಲ್ಕಿ ವತಿಯಿಂದ ವಿಶ್ವ ಮಹಿಳಾ ದಿನಾಚರಣೆ"



ಮಾರ್ಚ್ 25 2025 ರಂದು ಮಂಗಳವಾರ ಭಾಲ್ಕಿ ಪಟ್ಟಣದ ಹೊರವಲಯದಲ್ಲಿರುವ ಬಾಲ ಯೇಸು ಪುಣ್ಯ ಕ್ಷೇತ್ರದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಜನಜಾಗ್ರತಿ ತಾಲೂಕ ಒಕ್ಕೂಟ ಭಾಲ್ಕಿ ವತಿಯಿಂದ ವಿಶ್ವ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು. ಪ್ರಸ್ತಾವಿಕವಾಗಿ ಮಾತನಾಡಿದ ಶ್ರೀಮತಿ ವಿಮಲಾಬಾಯಿ, ಆರ್ಬಿಟ್ ಸಂಸ್ಥೆ ಮಹಿಳೆಯರ ಸಬಲೀಕರಣಕ್ಕಾಗಿ ಅನೇಕ ಉಪಕ್ರಮಗಳನ್ನು ಕೈಗೊಂಡಿದ್ದು, ಸುಮಾರು 30 ವರ್ಷಗಳಿಂದ ಸಂಸ್ಥೆಯೊಂದಿಗೆ ನಿಕಟ ಸಂಬಂಧ ಹೊಂದುವ ಮೂಲಕ, ಏನು ಅರಿಯದ ನಮಗೆ ವಿವಿಧ ತರಬೇತಿ ಕಾರ್ಯಾಗಾರಗಳು ಅರಿವಿನ ಕಾರ್ಯಕ್ರಮಗಳ ಮೂಲಕ ಸಕ್ರಿಯ ಮಹಿಳಾ ಸಂಘದ ಸದಸ್ಯತ್ವದೊಂದಿಗೆ ಇಂದು ನಾವು ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಸ್ವಾತಂತ್ರ್ಯತೆ ಹೊಂದಿದ್ದು. ನಾಯಕತ್ವ ಗುಣಗಳನ್ನು ಮಹಿಳೆಯರಲ್ಲಿ ಬೆಳೆಸುವಲ್ಲಿ ಆರ್ಬಿಟ್ ಸಂಸ್ಥೆಯ ಪಾತ್ರ ತುಂಬಾ ಹಿರಿದಾದದ್ದು. ಆರ್ಬಿಟ್ ಸಂಸ್ಥೆಯು ನಮಗೆ ಹೊಸ ಜನ್ಮ ನೀಡಿದೆ ಎಂದು ತಮ್ಮ ಅನುಭವದೊಂದಿಗೆ ಪ್ರಾಸ್ತವಿಕವಾಗಿ ಮಾತನಾಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಶ್ರೀಮತಿ ಸುಕನ್ಯಾ ರೇಷ್ಮೆ ಅವರು ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಇಂದಿನ ಮಹಿಳೆಯರು ಅನೇಕ ಕ್ಷೇತ್ರದಲ್ಲಿ ತಮ್ಮ ಸಾಧನೆಯನ್ನು ತೋರುತ್ತಿರುವುದು ತುಂಬಾ ಸಂತೋಷದಾಯಕ ಸಂಗತಿ. ಪುರುಷರಿಗಿಂತ ಮಹಿಳೆಯರು ಯಾವ ಕ್ಷೇತ್ರದಲ್ಲೂ ಹಿಂದೆ ಇಲ್ಲ. ಆದರೆ ಮಹಿಳೆಯರು ಸಾಗಬೇಕಾಗಿರುವ ಹಾದಿ ಇನ್ನು ಸಾಕಷ್ಟು ಇದೆ. ಹೆಣ್ಣು ತಾಯಿಯಾಗಿ, ಪತ್ನಿಯಾಗಿ, ಮಗಳಾಗಿ, ಸಹೋದರಿಯಾಗಿ ಕುಟುಂಬದ ಕಣ್ಣಾಗಿ ತನ್ನ ಜವಾಬ್ದಾರಿಯನ್ನು ನಿಭಾಯಿಸುತ್ತಿದ್ದಾಳೆ. ಮಹಿಳೆಯರ ಹೊರತಾಗಿ ಈ ಪ್ರಪಂಚವೇ ಕಲ್ಪಿಸಿಕೊಳ್ಳುವುದು ಕಷ್ಟ, ಆರ್ಬಿಟ್ ಸಂಸ್ಥೆ ಮಹಿಳೆಯರ ಸಬಲೀಕರಣಕ್ಕಾಗಿ ದುಡಿಯುತ್ತಿರುವುದು ನಮ್ಮ ನಿಮ್ಮೆಲ್ಲರ ಸೌಭಾಗ್ಯ ಎಂದು ತಮ್ಮ ಅಭಿಪ್ರಾಯವನ್ನು ಮಂಡಿಸಿದರು. ಈ ಕಾರ್ಯಕ್ರಮದಲ್ಲಿ ಡಿಸಿಸಿ ಬ್ಯಾಂಕ್‌ನ ಸಹಾಯಕ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಪ್ರತಾಪ್ ಸಿಂಗ್ ರಾಜಪುತ್ ಮಾತನಾಡಿ ಮಹಿಳೆಯರು ಆರ್ಥಿಕ ಶಿಸ್ತನ್ನು ಹೊಂದಬೇಕು. ಕಂಡ ಕಂಡಲ್ಲಿ ಸಾಲಗಳನ್ನು ತೆಗೆದುಕೊಳ್ಳುವ ಬದಲು ಡಿಸಿಸಿ ಬ್ಯಾಂಕ್ ನೊಂದಿಗೆ ವ್ಯವಹಾರ ಮಾಡಿದ್ದಲ್ಲಿ ಮಹಿಳೆಯರು ಅನೇಕ ಪ್ರಯೋಜನಗಳನ್ನು ಪಡೆಯಬಹುದು. ಕಡಿಮೆ ಬಡ್ಡಿಯ ದರದೊಂದಿಗೆ ಅನೇಕ ಸವಲತ್ತುಗಳನ್ನು ಬ್ಯಾಂಕ್ ನೀಡುತ್ತಿದೆ. ಖಾಸಗಿ ಸಂಸ್ಥೆಗಳಿಂದ ಸಾಲ ಪಡೆದುಕೊಂಡು ಇಂದಿನ ಮಹಿಳೆಯರು ಅನೇಕ ಸಮಸ್ಯೆಗಳನ್ನು ಅನುಭವಿಸುತ್ತಿದ್ದಾರೆ. ತಮ್ಮ ಜೀವನದಲ್ಲಿ ಉತ್ತಮ ಆರ್ಥಿಕ ಶಿಸ್ತನ್ನು ಹೊಂದುವ ಮೂಲಕ ಮಹಿಳೆಯರು ಏಳಿಗೆಯನ್ನು ಹೊಂದಬಹುದು ಎಂದು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಸಾಧಕ ಮಹಿಳೆಯರಿಗೆ ವೇದಿಕೆಯ ಮೇಲೆ ಉಪಸ್ಥಿತರಿದ್ದ ಗಣ್ಯರಿಂದ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಸ್ವ-ಸಹಾಯ ಸಂಘದ 800 ಮಹಿಳೆಯರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಕಾರ್ಯಕ್ರಮದಲ್ಲಿ ಮಹಿಳೆಯರು ಹಾಗೂ ಮಕ್ಕಳು ಸಂಸ್ಕೃತಿಕ ನೃತ್ಯ ನಾಟಕ ಕೋಲಾಟಗಳನ್ನು ಪ್ರದರ್ಶಿಸಿದರು. ದಿವ್ಯ ಸಾನಿಧ್ಯ ವಹಿಸಿದ ಸ್ಥಳೀಯ ನಿರ್ದೇಶಕರಾದ ವಂದನಿಯ ಫಾದರ ರೋಕಿ ತಮ್ಮ ಅಮೃತವಾಣಿಯನ್ನು ನುಡಿದರು. ಆರ್ಬಿಟ್ ಸಂಸ್ಥೆಯ ನಿರ್ದೇಶಕರಾದ ವಂದನೆಯ ಫಾದರ್ ವಿಕ್ಟರ್ ವಾಸ್, ಸಹ ನಿರ್ದೇಶಕರಾದ ಫಾದರ್ ವಿಜಯಕುಮಾರ್, ಶ್ರೀಮತಿ ಶಶಿಕಲಾ ಅಶೋಕ್ ಅಧ್ಯಕ್ಷರು ಟಿಎಂಸಿ ಭಾಲ್ಕಿ, ಉಪನ್ಯಾಸಕರಾದ ಶ್ರೀಮತಿ ವಿಜಯಲಕ್ಷ್ಮಿ ಗುಡ್ಡೆ, ಫಾದರ್ ರೇಜಿ, ಫ್ರಾನ್ಸಿಸ್. ಸಿಸ್ಟರ್ ಶೀಲಾ, ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರೀಮತಿ ನಿರ್ಮಲ, ಸುಜಾತ ಹಾಗೂ ಪ್ರಭಾವತಿ ಉಪಸ್ಥಿತರಿದ್ದರು. ಶ್ರೀಮತಿ ರಾಜೇಶ್ವರಿ ಪ್ರಾರ್ಥಿಸಿ, ಶ್ರೀಮತಿ ಷೆಲ್ಲಾ ರಾಣಿ ಸ್ವಾಗತಿಸಿ, ಶ್ರೀಮತಿ ಅರ್ಚನಾ ಮತ್ತು ಸುಲೋಚನಾ ನಿರೂಪಿಸಿ, ಶ್ರೀಮತಿ ಇಂದುಮತಿ ವಂದಿಸಿದರು.

ವರದಿಗಾರರು: ಸುಜಾತಾ

# ಸೇವಾ ಸಂಗಮ ಸಂಸ್ಥೆ, ಕಲಬುರಗಿ

## "ಎಲ್ಲಾ ಮಹಿಳೆಯರು ಮತ್ತು ಹೆಣ್ಣು ಮಕ್ಕಳಿಗೆ ಸಮಾನತೆಯ ಹಕ್ಕು ಸಶಕ್ತತೆ"



ದಿನಾಂಕ 11 ಮಾರ್ಚ್ 2025ರಂದು ಕಲಬುರಗಿ ನಗರ ಪ್ರದೇಶದಲ್ಲಿ ಮದರ ತೆರೆಸಾ ಚರ್ಚನ ಸಭಾಗಂಣದಲ್ಲಿ ಅತರಾಷ್ಟೀಯ ಮಹಿಳಾ ದಿನಾಚಾರಣೆಯ **"ಎಲ್ಲಾ ಮಹಿಳೆಯರು ಮತ್ತು ಹೆಣ್ಣು ಮಕ್ಕಳಿಗೆ ಸಮಾನತೆಯ ಹಕ್ಕು ಸಶಕ್ತತೆ"** ಈ ಧ್ಯಯ ವಾಕ್ಯದೊಂದಿಗೆ ಪ್ರಾರಂಭಿಸಲಾಯಿತ್ತು. ಈ ಕಾರ್ಯಕ್ರಮಕ್ಕೆ ದಿವ್ಯ ಸಾನಿಧ್ಯ ವಹಿಸಿದ ವಂದನಿಯ ಬಿಷಪ ರಾಬರ್ಟ ಮೈಕಲ್ ಮಿರಂದ ಧರ್ಮಾಧ್ಯಕ್ಷರು ಹಾಗೂ ಅಧ್ಯಕ್ಷರು ಸೇವಾಸಂಗಮ ಸಂಸ್ಥೆ ಕಲಬುರಗಿ ರವರು ಮಹಿಳೆಯರು ವಿವಿಧ ರಂಗಗಳಲ್ಲಿ ಮುಂದುವರೆಯಿತ್ತಿದ್ದಾರೆ ಎಂದು ಹೇಳುತ್ತಾ ಆಶೀರ್ವಾಚನ ನುಡಿಗಳು ನುಡಿದರು. ಅಧ್ಯಕ್ಷತೆ ಸ್ಥಾನವನ್ನು ಅಲಂಕರಿಸಿದತಂಹ ಸಿಸ್ಟರ ಸಿಂಧಿಯ ರವರು ಮಹಿಳೆಯರು ತಮ್ಮ ಹಕ್ಕುಗಳಿಗಾಗಿ ನಿರಂತರ ಹೋರಾಟ ಮಾಡಿದಾಗ ಮಾತ್ರ ತಮ್ಮ ಹಕ್ಕುಗಳು ಪಡೆಯಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು. ಶ್ರೀ ಅಭಿಷೇಕ ಅಲ್ಲಮ ಪ್ರಭು ಪಾಟೀಲ ಪ್ರಥಮ ದರ್ಜೆಯ ಗುತ್ತಿಗೆದಾರರು ಕಲಬುರಗಿ ಇವರು ಇಂದಿನ ಆಧುನಿಕ ಯುಗದಲ್ಲಿ ಗಂಡು ಹೆಣ್ಣು ಸಮಾನತೆಯನ್ನು ಹೋಂದಿದಾರೆ ಗಂಡು ಹೆಣ್ಣು ಬೇದ ಭಾವ ಮಾಡಬಾರದೆಂದು ತಿಳಿಸಿದರು. ಶ್ರೀ ಶರಣು ಪಪ್ಪಾ ಅಧ್ಯಕ್ಷರು ಪೂರ್ಣಿಮಾ ಬಿರಾದರ ಚಾರಿಟೆಬಲ ಟ್ರಸ್ಟ್ ಕಲಬುರಗಿ ಇವರು ಸೇವಾಸಂಗಮ ಸಂಸ್ಥೆಯು ಹಲವಾರು ವರ್ಷಗಳಿಂದ ಮಹಿಳಾ ಅಭಿವೃದ್ಧಿ ಕಾರ್ಯನಿರ್ವಹಿಸುತ್ತಾ ಬಂದಿದೆ. ಸಮಾಜದಲ್ಲಿ ಉತ್ತಮವಾದ ಅಭಿವೃದ್ಧಿ ಕಾರ್ಯಕ್ರಮಗಳು ಮಡುತ್ತಿವೆ ಎಂದರು. ಶ್ರೀಮತಿ ಜ್ಯೋತಿ ಅರಣುಕುಮಾರ ಪಾಟೀಲ್ ನಿರ್ದೇಶಕರು ಎಚ್.ಕೆ ಈ ಸೋಸೈಟಿ ಕಲಬುರಗಿ, ಮಹಿಳೆಯರ ಅಭಿವೃದ್ಧಿಯೇ ದೇಶದ ಅಭಿವೃದ್ಧಿ ಎಂದು ತಿಳಿಸಿದರು. ಡಾ॥ ವಿನಿತಾ ಬೇಲೂರು ದಂತ ವೈದ್ಯರು ಭಗವಹಿಸಿದ್ದರು. ಈ ಒಂದು ಕಾರ್ಯಕ್ರಮದಲ್ಲಿ ತಮ್ಮ ಕಾರ್ಯಕ್ಷೇತ್ರಗಳಲ್ಲಿ ತಮ್ಮದೇ ಆದ ಕಾರ್ಯವೈಖರಿ ಮೂಡಿಸುವುದರ ಜೊತೆಗೆ ಬೇರೆ ಮಹಿಳೆಯರು ಮಾದರಿ ಆಗಿರುವ ಗ್ರಾಮೀಣ ಭಾಗದ 5 ಜನ ಮಹೀಳಾ ಸಾಧಕೀಯರಿಗೆ ಸನ್ಮಾಯಿಸಲಾಯಿತು. ಅದೇರೀತಿ ಸ್ವಾವಂಬನೆ ಯೋಜನೆ ಅಡಿಯಲ್ಲಿ 10 ಮಹಿಳೆಯರಿಗೆ ತಲಾ 15000 ಸಾವಿರವಂತೆ ಚೆಕ್‌ಯನ್ನು ನೀಡಲಾಯಿತು. ಈ ಒಂದು ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಶ್ರೀಮತಿ ಶ್ರೀಲತಾ ಮಹಿಳೆಯರ ಸಮಾನತೆ ಹಾಗೂ ಮಹಿಳೆಯರ ಶಿಕ್ಷಣ ಆಗುವವರೆಗೆ ಸಮಾಜದಲ್ಲಿ ಸಿಗುವ ಸ್ಥಾನಮಾನಗಳ ಸಾಧ್ಯವಿಲ್ಲ ಇನ್ನೂ ಹೆಚ್ಚಿನ ರೀತಿಯಲ್ಲಿ ಎಲ್ಲಾ ಕ್ಷೇತ್ರಗಳಲ್ಲಿ ಪಾಲುದಾರಿಕೆಯಲ್ಲಿ ಹೆಚ್ಚೆನ್ನಿಡಬೇಕು ಎಂದು ಮಾಹಿತಿಯನ್ನು ನೀಡಿದರು. ಈ ಕಾರ್ಯಕ್ರಮದಲ್ಲಿ ಸಾನಿಧ್ಯ ಫಾದರ್ ಪ್ರವೀಣ್ ಜೋಸೆಫ ಮಖ್ಯಗುರುಗಳು ಸೇಂಟ್ ಮೇರಿ ಚರ್ಚ ಕಲಬುರಗಿ, ಸಂಸ್ಥೆಯ ನಿರ್ದೇಶಕರಾದ ಫಾದರ ವಿಕ್ಟರ್ ವಾಸ್, ಸಂಸ್ಥೆ ಸಹನಿರ್ದೇಶಕರಾದ ಫಾದರ ದೀಪಕ್ ಮಡಾದೊ, ಸಂಸ್ಥೆಯ ಎಲ್ಲಾ ಸಿಬ್ಬಂದಿ ವರ್ಗದರು, ಈ ಕಾರ್ಯಕ್ರಮದ ಕೇಂದ್ರ ಬಿಂದುಗಳಾದ ಮಹಿಳಾ ಸ್ವ-ಸಹಾಯ ಸಂಘದ ಮಹಿಳೆಯರು, ರೈತ ಮಹಿಳೆಯರು, ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಯೋಜನೆಯ ಪಾಲಕರು ಭಾಗವಹಿಸಿದರು. ಈ ಕಾರ್ಯಕ್ರಮವನ್ನು ಶ್ರೀಮತಿ ನಂದಿನಿ ಅವರು ನಿರೂಪಿಸಿದರು, ಕುಮಾರಿ ಅನಿತಾ ಸ್ವಾಗತಿಸಿದರು, ಶ್ರೀಮತಿ ವಿಜಯಲಕ್ಷ್ಮೀ ವಂದಿಸಿದರು. ಈ ಕಾರ್ಯಕ್ರಮದಲ್ಲಿ 237 ಜನ ಮಹಿಳೆಯರು ಭಾಗವಹಿಸಿ ಯಶ್ವಸಿಗೊಳಿಸಿದರು.





## "ಸರ್ಕಾರದಿಂದ ಸಿಗುವ ಸಾಲಭ್ಯಗಳು ಪಿಂಚಣಿ ಪಡೆಯುವಲ್ಲಿ ಆಗುತ್ತಿರುವ ಸಮಸ್ಯೆಗಳ ಕುರಿತು ಜಾಗೃತಿ"



ದಿನಾಂಕ 24 ಮಾರ್ಚ್2025 ರಂದು ಸೇವಾಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮ ಜಿ ಫೌಂಡೇಶನ್ ಕಲಬುರ್ಗಿ ಸಂಯುಕ್ತ ಆಶ್ರಯದಲ್ಲಿ ಶೀಘ್ರ ಪತ್ತೆ ಹಚ್ಚಿವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯಡಿಯಲ್ಲಿ 0–6 ವರ್ಷದ ಒಳಗಿನ ಮಕ್ಕಳಿಗೆ ಸರ್ಕಾರದಿಂದ ಸಿಗುವ ಸಾಲಭ್ಯಗಳು ಪಿಂಚಣಿ ಪಡೆಯುವಲ್ಲಿ ಆಗುತ್ತಿರುವ ಸಮಸ್ಯೆಗಳ ಕುರಿತು ಕಲಬುರಗಿ ನಗರದ ತಶೀಲ್ದಾರ್ ಗ್ರೇಡ್ 1 ಶ್ರೀ ಅನಂದಶೀಲ ಅವರೊಂದಿಗೆ ಜಿಲ್ಲಾ ಪಾಲಕರ ಪಕ್ಕೂಟದ ಸದಸ್ಯರುನ್ನು ಕರೆದುಕೊಂಡು ಹೋಗಿ ಚರ್ಚಿಸಿ ಮನವಿ ಪತ್ರ ಸಲ್ಲಿಸಲಾಯಿಯಿತು. ಈ ಕಾರ್ಯಕ್ರಮದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ವ್ಯವಸ್ಥಾಪಕರಾದ ಶ್ರೀಮತಿ ಶ್ವೇತಾ ಕುಲ್ಕರ್ಣಿ ಹಾಗೂ ಶ್ರೀಮತಿ ಶಿವಕಾಂತ, ಶ್ರೀಮತಿ ಜಗದೇವಿ, ಕು. ಅನಿತಾ ಹಾಗೂ 12 ಜನ ಪಾಲಕರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## "ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳ ಪಾಲಕರ ಸಭೆ"



ಮಾರ್ಚ್ 12 ರಂದು ಸೇವಾಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮ್ ಜಿ ಫೌಂಡೇಶನ್, ಕಲಬುರ್ಗಿ ಇವರ ಸಂಯುಕ್ತ ಆಶ್ರಯದಲ್ಲಿ ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳ ಪಾಲಕರ ಸಭೆ ಕಲಬುರ್ಗಿ ನಗರ ಪ್ರದೇಶದಲಿ ಅಂಬಿಕಾ ನಗರದ ಅಂಗನವಾಡಿ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಕು. ಅನಿತಾ ಅವರು ಪಾಲಕರ ಮಕ್ಕಳಿಗೆ ಇರುವ ಸಮಸ್ಯೆಗಳ ಕುರಿತು ಚರ್ಚೆ ಮಾಡಲಾಯಿತು. ಪಿಂಚಣಿ ಪೋಷಣಾ ಭತ್ಯ ಇದರ ಸಮಸ್ಯೆ ಬಹಳ ಆಗುತ್ತಿರುವ ಕಾರಣ ಸರ್ಕಾರದ ಸೌಲಭ್ಯಗಳ ಪಾಲಕರು ಗುಂಪುಗಳನ್ನು ಮಾಡಿಕೊಂಡು ನಮಗೆ ಮತ್ತು ನಮ್ಮ ಮಕ್ಕಳಿಗೆ ಸೌಲಭ್ಯ ಪಡೆದುಕೊಳಲು ಈ ಗುಂಪು ಅವಶ್ಯಕತೆ ಇದೆ ಎಂಬುದರ ಕುರಿತು ಮಾಹಿತಿ ತಿಳಿಸಿದರು. 6 ಜನ ಪಾಲಕರು ಉಪಸ್ಥಿತರಿದ್ದರು.

## "ಕರಪತ್ರ ಹಂಚುವದರ ಮೂಲಕ ಬೆಳವಣಿಗೆಯಲ್ಲಿ ಕುಂಠಿತ ಮಕ್ಕಳ ಜಾಗೃತೆ ಕಾರ್ತಕ್ರಮ"



ದಿನಾಂಕ 24 ರಂದು ಸೇವಾಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮ್ ಜೀ ಫೌಂಡೇಶನ್ನ ಸಂಯುಕ್ತ ಆಶ್ರಯದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಅಡಿಯಲ್ಲಿ ಕಲ್ಬುರ್ಗಿ ನಗರ ಪ್ರದೇಶದಲ್ಲಿರುವ ಶರಣಬಸವೇಶ್ವರ ದೇವಸ್ಥಾನದಲ್ಲಿ ಕರಪತ್ರ ಹಂಚುವದರ ಮೂಲಕ ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳ ಬಗ್ಗೆ ಮಾಹಿತಿ ನೀಡಿತ ತಮ್ಮ ಸುತ್ತಮುತ್ತಲಿ ಇಂತಹ ಮಕ್ಕಳು ಕಂಡು ಬಂದರೆ ಚೇತನ ಅರ್ಲಿ ಇಂಟರ್ವ್ಯೂಷನ್ಸ್ ಕೇಂದ್ರಕ್ಕೆ ಕಳಿಸಿಕೊಡಿ ಎಂದು ಸೇವಾಸಂಗಮ ಸಂಸ್ಥೆಯ ಕಾರ್ಯಕರ್ತರಾದ ಶ್ರೀ ಮತಿ ಶಿವಕಾಂತ ಕುಮಾರಿ ಅನಿತಾ ಶ್ರೀ ಮತಿ ಜಗದೇವಿ 150 ಜನರಿಗೆ ಮಾಹಿತಿ ತಿಳಿಸಿದರು.

## "ಅಂಗನವಾಡಿ ಕೇಂದ್ರದಲ್ಲಿ ಪಾಲಕರ ಸಭೆ"




ಮಾರ್ಚ್ 15 ರಂದು ಸೇವಾಸಂಗಮ ಸಂಸ್ಥೆ ಮತ್ತು ಅಜೀಂ ಪ್ರೇಮ್ ಜೀ ಯವರ ಸಂಯೋಗದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಯೋಜನೆಯ ಅಡಿಯಲ್ಲಿ ಕಲ್ಬುರ್ಗಿ ನಗರ ಪ್ರದೇಶದ ಇಕ್ಬಾಲ್ ಕಾಲೋನಿಯ ಅಂಗನವಾಡಿ ಕೇಂದ್ರದಲ್ಲಿ ಪಾಲಕರ ಸಭೆಯನ್ನು ಮಾಡಲಾಯಿತು. ಈ ಸಭೆಯಲ್ಲಿ ವಿಕಲ ಚೇತನ ಮಕ್ಕಳಿಗೆ ಸರಕಾರದಿಂದ ಸಿಗುವ ಸೌಲಭ್ಯಗಳು ಕುರಿತು ಮತ್ತು ಮಕ್ಕಳ ಶಿಕ್ಷಣದ ಕುರಿತು 2016ರ ವಿಕಲ ಚೇತನ ಮಕ್ಕಳಿಗೆ ಶಿಕ್ಷಣದ ಸೌಲಭ್ಯಗಳ ಕುರಿತು ಅವುಗಳನ್ನು ನಾವು ಯಾವರೀತಿ ಪಾಲಕರ ಒಗ್ಗಟ್ಟಿನ ಮೂಲಕ ಸೌಲಭ್ಯಗಳನ್ನು ಪಡೆದುಕೊಳ್ಳಬಹುದು ಎನ್ನುವುದರ ಕುರಿತು ಚರ್ಚೆ ಮಾಡಲಾಯಿತು. ಈ ಸಭೆಅಲ್ಲಿ ಯೋಜನೆ ವ್ಯವಸ್ಥಾಪಕರವಾದ ಶ್ರೀಮತಿ ಶ್ವೇತಾ ಕಾರ್ಯಕರ್ತರ ಶ್ರೀಮತಿ ಶಿವಕಾಂತ್ 13 ಜನ ಪಾಲಕರು ಉಪಸ್ಥಿತರಿದ್ದರು.

## "ಗ್ರಾಮ ಪಂಚಾಯಿತಿಯಲ್ಲಿ ವಿವಿಧೋದ್ದೇಶಗಳ ಗ್ರಾಮ ಸಭೆ 5 ಪ್ರತಿಶತದಷ್ಟು ಅನುದಾನ ಮೀಸಲು"



27 ಮಾರ್ಚ್ 2025ರಂದು ಕಲ್ಬುರ್ಗಿ ಜಿಲ್ಲೆಯಲ್ಲಿ ಬರುವ ಫಿರೋಜಬಾದ ಗ್ರಾಮ ಪಂಚಾಯಿತಿಯಲ್ಲಿ ವಿವಿಧೋದ್ದೇಶಗಳ ಗ್ರಾಮ ಸಭೆಯನ್ನು ಆಯೋಜಿಸಿದ್ದು, ಸೇವಾಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮ್ ಜೀ ಫೌಂಡೇಶನ್ನ ಸಂಯೋಗದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಯೋಜನೆ ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳ ಪಾಲಕರ ಅಡಿಯಲ್ಲಿ ರಚಿಸಿದ ಪಾಲಕರ ಗುಂಪಿ ವತಿಯಿಂದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಹಾಗೂ ಅಧ್ಯಕ್ಷರಿಗೆ ವಿಕಲ ಚೇತನರ ಅಭಿವೃದ್ಧಿಗಾಗಿ ಮೀಸಲಾತಿ ಇರುವ 5 (ಐದು) ಪ್ರತಿಶತದಷ್ಟು ಅನುದಾನವನ್ನು ವಿಕಲ ಚೇತನರ ಮಕ್ಕಳ ಅಭಿವೃದ್ಧಿಗಾಗಿ ನೀಡಬೇಕೆಂದು ಪಾಲಕರ ಗುಂಪು ಮನವಿ ಪತ್ರವನ್ನು ಸಲ್ಲಿಸಿದರು. ಮನವಿ ಪತ್ರವನ್ನು ಸ್ವೀಕರಿಸಿ ಮಾತನಾಡಿದ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ತಾವು ನೀಡಿದ ಮನವಿ ಪತ್ರದ ಕುರಿತು ತಿಂಗಳ ಸಭೆಯಲ್ಲಿ ಅಧ್ಯಕ್ಷರು ಮತ್ತು ಸರ್ವಸದಸ್ಯರ ಸಮ್ಮುಖದಲ್ಲಿ ಚರ್ಚಿಸುತ್ತೇವೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ರೇಣುಕ ಪಾಲಕರ ಗುಂಪಿನಲ್ಲಿ ಅಧ್ಯಕ್ಷರು ಹಾಗೂ ಅಂಗನವಾಡಿ ಕಾರ್ಯಕರ್ತರ ಜಗದೇವಿ, ಗ್ರಾಮಸ್ಥರು ಶ್ರೀ ಮತಿ ಸಾಬವ್ವ ಅಪ್ಪಣ್ಣ ಶ್ರೀ ಮತಿ, ಅಂಗನವಾಡಿ ಸಹಾಯಕಿ ಭೀಮಬಾಯಿ ವಿಜಯಲಕ್ಷ್ಮಿ, ಸೇವಾಸಂಗಮ ಸಂಸ್ಥೆಯ ಕಾರ್ಯಕರ್ತರು ಶ್ರೀ ಮತಿ ದಾಕ್ಷಾಯಿಣಿ ರವರು ಉಪಸ್ಥಿತರಿದ್ದರು.

## "ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬಾಲ್ಯವಿವಾಹದ ಕುರಿತು ಜಾಗೃತಿ ಕಾರ್ಯಕ್ರಮ"



20 ಮಾರ್ಚ್ 2025ರಂದು ಸೇವಾಸಂಗಮ ಸಂಸ್ಥೆ ಮತ್ತು ಅಜೀಂ ಪ್ರೇಮ್ ಜೀ ಫೌಂಡೇಶನ್ನ ಸಂಯೋಗದಲ್ಲಿ ಕಲ್ಬುರ್ಗಿ ನಗರದ ರಾಣೇಶ್ಪೂರ್ ದರ್ಗಾದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬಾಲ್ಯವಿವಾಹದ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಬಾಲ್ಯವಿವಾಹವು ಶಿಕ್ಷಾರ್ಹ ಅಪರಾಧವೆಂದು ಮಾತನಾಡುತ್ತ ಹೆಣ್ಣು ಮಕ್ಕಳಿಗೆ 18 ವರ್ಷ ಗಂಡು ಮಕ್ಕಳಿಗೆ 21 ವರ್ಷ ನಿಗದಿ ಪಡಿಸಲಾಗಿದೆ ಇದರಿಂದ ಆಗುವ ದುಷ್ಪರಿಣಾಮಗಳೆಂದರೆ ಮಕ್ಕಳು 18 ವರ್ಷ ತುಂಬುವುದಕ್ಕಿಂತ ಮುಂಚೆ ಗರ್ಭವು ಚೆನ್ನಾಗಿ ಬೆಳೆದಿರದ ಕಾರಣ ಮಗು ಹೆರುವುದು ಕಷ್ಟವಾಗುತ್ತದೆ ಎಂಬುವ ದೃಷ್ಟಿಯಿಂದ ಬಾಲ್ಯವಿವಾಹವನ್ನು ನಿಷೇಧಿಸಲಾಗಿದೆ ಎಂದು ಶ್ರೀಮತಿ ವಿಜಯಲಕ್ಷ್ಮಿ ಅವರು ತಿಳಿಸಿದರು. ಇದರಲ್ಲಿ 25 ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

## “ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ”



ದಿನಾಂಕ 25 ಮಾರ್ಚ್ 2025 ರಂದು ಆಶ್ರಯ ಕಾಲೋನಿ ಅಂಗನವಾಡಿ ಕೇಂದ್ರ 3 ರಲ್ಲಿ ಸೇವಾಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮ್ ಜೀ ಫೌಂಡೇಶನ್ಸ ಸಂಯೋಗದಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಹುಟ್ಟಿನಿಂದ 6 ವರ್ಷದ ಒಳಗಿನ ವಿಶೇಷ ಚೇತನವುಳ್ಳ ಮಕ್ಕಳನ್ನುಗುರುತಿಸಿ ಆ ಮಕ್ಕಳಿಗೆ ವಿವಿಧ ರೀತಿಯಲ್ಲಿ ಚಟುವಟಿಕೆ ಮಾಡಿ, ಬದಲಾವಣೆಯನ್ನು ತರುವ ಉದ್ದೇಶವೇ ಈ ಕಾರ್ಯಕ್ರಮದ ಮೂಲ ಉದ್ದೇಶವೆಂದು ತಿಳಿಸಲಾಯಿತು. ಕಾರ್ಯಕ್ರಮದಲ್ಲಿ ಒಟ್ಟು 16 ಜನ ಸದಸ್ಯರು ಭಾಗವಹಿಸಿದ್ದರು.

## ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳ ಪೋಷಕರ ಸಭೆ ಹಾಗೂ 5% ಪ್ರತಿಶತದಷ್ಟು ಅನುದಾನ ಮೀಸಲು”



ಕಲಬುರ್ಗಿ ನಗರ ಪ್ರದೇಶದಲ್ಲಿ ಬರುವಂತಹ ಮದರ್ ತೆರೇಸಾ ಸಭಾಂಗಣದಲ್ಲಿ 20 ಮಾರ್ಚ್ 2025 ರಂದು ಸೇವಾಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮ ಜಿ ಫೌಂಡೇಶನ್, ಕಲಬುರ್ಗಿ ಇವರ ಸಂಯುಕ್ತ ಆಶ್ರಯದಲ್ಲಿ District level parents champion group meeting ಹಮ್ಮಿಕೊಳ್ಳಲಾಯಿತು. ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ವ್ಯವಸ್ಥಾಪಕರಾದ ಶ್ರೀಮತಿ ಶ್ವೇತಾ ಕುಲ್ಕರ್ಣಿ ಅವರು ಈ ಸಭೆಯಲ್ಲಿ ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳಿಗೆ ಇರುವ ಸರ್ಕಾರಿ ಸೌಲಭ್ಯಗಳನ್ನು ಯಾವರೀತಿ ಪಡೆದುಕೋಳಬೇಕು ಎಂಬುದರ ಕುರಿತು ಮಾಹಿತಿಯನ್ನು ನೀಡಿದರು. ಒಗ್ಗಟ್ಟಿನಲ್ಲಿ ಬಲವಿದೆ ನಾವೇಲರು ಕೊಡಿಕೋಂಡು ಮಕ್ಕಳಿಗೆ ಗ್ರಾಮಪಂಚಾಯಿತಿ 5% ಅನುದಾನ ಹಾಗೂ ವಿಕಲಚೇತನ ಪಿಂಚಣಿ ಮಾಡಿಸುವಲ್ಲಿ ಎದುರಿಸುತ್ತಿರುವ ಸಮಸ್ಯೆಗಳು ಇವೆಲ್ಲ ಸಮಸ್ಯೆಗಳು ನಾವೇಲ ಪಾಲಕರು ಒಂದುಗೂಡಿ ಆ ಯೊಜನೆಯ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಶ್ರೀಮತಿ ಶಿವಕಾಂತ, ಶ್ರೀಮತಿ ಜಗದೇವಿ, ಕು. ಅನಿತಾ ಅವರು ಹಾಗೂ 9 ಜನ ಪಾಲಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## “ಗ್ರಾಮ ಪಂಚಾಯಿತಿಯಲ್ಲಿ ವಿವಿಧೋದ್ದೇಶಗಳ ಗ್ರಾಮಸಭೆ, ವಿಕಲ ಚೇತನರ ಅಭಿವೃದ್ಧಿಗಾಗಿ ಮೀಸಲಾತಿ”



26 ಮಾರ್ಚ್ ರಂದು ಕಲ್ಬುರ್ಗಿ ತಾಲೂಕಿನಲ್ಲಿ ಬರುವ ಸಾವಳಗಿ ಗ್ರಾಮ ಪಂಚಾಯಿತಿಯಲ್ಲಿ ವಿವಿಧೋದ್ದೇಶಗಳ ಗ್ರಾಮಸಭೆಯನ್ನು ಆಯೋಜಿಸಿದ್ದು. ಸೇವಾಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮ ಜಿ ಫೌಂಡೇಶನ್, ಸಂಯೋಗದಲ್ಲಿ ಶೀಘ್ರ ಪತ್ತೆ ಹಚ್ಚುವಕ್ಕೆ ಮತ್ತು ಆರಂಭಿಕ ಶಿಕ್ಷಣದ ಯೋಜನೆ ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳ ಪಾಲಕರ ಅಡಿಯಲಿ ರಚಿಸಿದ ಪಾಲಕರ ಗುಂಪಿನ ವತಿಯಿಂದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಹಾಗೂ ಅಧ್ಯಕ್ಷರಿಗೆ ವಿಕಲ ಚೇತನರ ಅಭಿವೃದ್ಧಿಗಾಗಿ ಮೀಸಲಾತಿ ಇರುವ, 5% ಐದು ಪ್ರತಿಶತದಷ್ಟು ಅನುದಾನವನ್ನು ವಿಕಲ ಚೇತನರ ಮಕ್ಕಳ ಅಭಿವೃದ್ಧಿಗಾಗಿ ನೀಡಬೇಕೆಂದು ಪಾಲಕರ ಗುಂಪು ಮನವಿ ಪತ್ರವನ್ನು ಸಲ್ಲಿಸಿದರು. ಮನವಿ ಪತ್ರವನ್ನು ಸ್ವೀಕರಿಸಿ ಮಾತನಾಡಿದ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ತಾವು ನೀಡಿದ ಮನವಿ ಪತ್ರದ ಕುರಿತು ತಿಂಗಳ ಸಭೆಯಲ್ಲಿ ಅಧ್ಯಕ್ಷರು ಮತ್ತು ಸರ್ವಸದಸ್ಯರ ಸಮ್ಮುಖದಲ್ಲಿ ಚರ್ಚಿಸುತ್ತೇವೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಗ್ರಾಮಪಂಚಾಯಿತಿಯ ಸದಸ್ಯರಾದ ಶ್ರೀ ಉಸ್ಮಾನ ಗಣಿ, ಪಾಲಕರ ಗುಂಪಿನಲ್ಲಿ ಪಂಚಾಯಿತಿಯ ಅಧ್ಯಕ್ಷರಾದ ರಮೇಶ ಕಣ್ಣೂರ್, ಉಪಾಧ್ಯಕ್ಷರಾದ ಶ್ರೀಮತಿ ಅರುಣಿಕ, ಶ್ರೀಮತಿ ಕಲಾವತಿ, ವಿ.ಆರ್.ಡಬ್ಲ್ಯ ಶಿವಾನಂದ್, ಅಂಗನವಾಡಿ ಮತ್ತು ಆಶಾ ಕಾರ್ಯಕರ್ತರು, ಸೇವಾಸಂಗಮ ಸಂಸ್ಥೆಯ ಶ್ರೀ ರಾಜಕುಮಾರ್ ಕು. ಲಕ್ಷ್ಮಿ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## “ಬಾಲ್ಯವಿವಾಹದ ಕುರಿತು ಜಾಗೃತಿ ಕಾರ್ಯಕ್ರಮ”



6 ಮಾರ್ಚ್ ರಂದು ಸೇವಾಸಂಗಮ ಸಂಸ್ಥೆ ಮತ್ತು ಅಜೀಂ ಪ್ರೇಮ ಜಿ ಫೌಂಡೇಶನ್, ಸಂಯೋಗದಲ್ಲಿ ಕಲ್ಬುರ್ಗಿ ತಾಲೂಕಿನ ಯಳವಂತಿಗೆ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬಾಲ್ಯವಿವಾಹದ ಕುರಿತು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಈ ಕಾರ್ಯಕ್ರಮದಲ್ಲಿ ಬಾಲ್ಯವಿವಾಹ ಎಂದರೇನು? ಬಾಲ್ಯವಿವಾಹಕ್ಕೆ ಕಾರಣಗಳು, ಬಾಲ್ಯವಿವಾಹ ಹೇಗೆ ತಡೆಗಟ್ಟುವುದು ಕುರಿತು ಕುಮಾರಿ ಲಕ್ಷ್ಮಿಅವರು ಮಾಹಿತಿ ತಿಳಿಸಿದರು. ಇದರಲ್ಲಿ 30 ಜನ ವಿದ್ಯಾರ್ಥಿ ವಿದ್ಯಾರ್ಥಿನಿಯರು ಹಾಗೂ ಶಿಕ್ಷಕರು ಉಪಸ್ಥಿತರಿದ್ದರು.



10 ಮಾರ್ಚ್ 2025ರಂದು ಸೇವಾಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮ ಜಿ ಫೌಂಡೇಶನ್, ಸಂಯುಕ್ತ ಆಶ್ರಯದಲ್ಲಿ ಕಲಬುರಗಿ ನಗರದಲ್ಲಿರುವ ಶಾಂತಿ ನಗರದಲ್ಲಿ ಬಾಲ್ಯವಿವಾಹದ ಬಗ್ಗೆ ಮಾಹಿತಿ ಕಾರ್ಯಕ್ರಮ ಮಾಡಲಾಯಿತು. ಹೆಣ್ಣು ಮಗುವಿಗೆ 18 ವರ್ಷ ಗಂಡು ಮಗುವಿಗೆ 21 ವರ್ಷ ಮದುವೆ ಮಾಡುವ ವಯಸ್ಸು 18 ವರ್ಷದ ಒಳಗಿನ ಹೆಣ್ಣು ಮಕ್ಕಳಿಗೆ ಮದುವೆ ಮಾಡಿದರೆ ಕಾನೂನಿನ ಪ್ರಕಾರ ಅಪರಾಧ ಮತ್ತು ಶಿಕ್ಷೆ ಇದೆ ಬಾಲ್ಯವಿವಾಹದಿಂದ ಹೆಣ್ಣು ಮಗುವಿನ ಜೀವನ ಅಂಧಕಾರ ಆಗುತ್ತದೆ; ಅವಳ ಆರೋಗ್ಯದ ಮೇಲೆ ಸಹ ಪರಿಣಾಮ ಬೀರುತ್ತದೆ ಎಂದು ಶ್ರೀಮತಿ ಶಿವಕಾಂತಾ ರವರು ಮಾಹಿತಿ ತಿಳಿಸಿದರು ಶಾಂತಿ ನಗರ ಅಂಗನವಾಡಿ ಕೇಂದ್ರ ಕಾರ್ಯಕರ್ತೆಯಾದ ರುಕ್ಮಿಣಿ ಹಾಗೂ 10 ಜನ ಪಾಲಕರು ಉಪಸ್ಥಿತರಿದ್ದರು.

## “ಕ್ಯಾನ್ಸರ್ ಕುರಿತು ಅರಿವು ಕಾರ್ಯಕ್ರಮ”



ಮಾರ್ಚ್ 12 2025ರಂದು ಆಳಂದ ತಾಲೂಕ ಪಂಚಾಯತ ಕಾರ್ಯಾಲಯದಲ್ಲಿ ಸೇವಾಸಂಗಮ ಸಂಸ್ಥೆಯ ವತಿಯಿಂದ ಶ್ರೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆ ಅಡಿಯಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ಕ್ಯಾನ್ಸರ್ ಎಂದರೇನು? ಅದರ ಲಕ್ಷಣಗಳು ತಿಳಿಸಿದರು. ಕ್ಯಾನ್ಸರ್‌ನಿಂದ ತಪ್ಪಿಸಿಕೊಳ್ಳಲು, ತೂಕವನ್ನು ಕಾಪಾಡಿಕೊಳ್ಳಿ ಎಂದು ಕಾರ್ಯಕ್ರಮದ ಕಾರ್ಯಕರ್ತೆಯಾದ ಕುಮಾರಿ ಮಾಲಾಶ್ರೀರವರು 50 ಜನ ಅಂಗನವಾಡಿ ಕಾರ್ಯಕರ್ತೆಯರಿಗೆ ತಿಳಿಸಲಾಯಿತು.

## “5% ಪ್ರತಿಶತ ಅನುದಾನಕಾಗಿ ಮನವಿ ಪತ್ರವನ್ನುಸ ಲ್ಲಿಸಿದರು”



19 ಮಾರ್ಚ್ 2025ರಂದು ಕಲಬುರಗಿ ತಾಲ್ಲೂಕಿನಲ್ಲಿ ಬರುವ ಫರಹತಬಾದ ಗ್ರಾಮಪಂಚಾಯತನಲ್ಲಿ ಸೇವಸಂಗಮ ಸಂಸ್ಥೆ, ಕಲಬುರಗಿ ಹಾಗೂ ಅಜೀಂ ಪ್ರೇಮ ಜಿ ಫೌಂಡೇಶನ್, ಸಂಯುಕ್ತ ಆಶ್ರಯದಲ್ಲಿ ರಚಿಸಿದ ಪೋಷಕರ ಸಭೆ ವತಿಯಿಂದ ಪಂಚಾಯತ ಅಭಿವೃದ್ಧಿ ಅಧಿಕಾರಿಗಳಿಗೆ ಹಾಗು ಅಧ್ಯಕ್ಷರಿಗೆ ವಿಕಲ ಚೇತನರ ಅಭಿವೃದ್ಧಿಗಾಗಿ ಮೀಸಲಿರುವ 5% ಐದು ಪ್ರತಿಶತ ಅನುದಾನವನ್ನು ವಿಕಲ ಚೇತನ ಮಕ್ಕಳ ಅಭಿವೃದ್ಧಿಗಾಗಿ ನೀಡಬೇಕೆಂದು Parents Champion Group ತಾಯಂದಿರು ಮನವಿ ಪತ್ರವನ್ನು ಸಲ್ಲಿಸಿದರು. ಮನವಿ ಪತ್ರವನ್ನು ಸ್ವೀಕರಿಸಿ ಮಾತನಾಡಿದ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ತಾವು ನೀಡಿದ ಮನವಿ ಪತ್ರದ ಕುರಿತು ಅಧ್ಯಕ್ಷರ ಮತ್ತು ಸರ್ವಸದಸ್ಯರ ಸಮ್ಮುಖದಲ್ಲಿ ಚರ್ಚಿಸುತ್ತೇವೆ ಎಂದು ತಿಳಿದರು. ಈ ಸಂದರ್ಭದಲ್ಲಿ ಗ್ರಾಮಪಂಚಾಯತ ಸದಸ್ಯರಾದ ಶ್ರೀ ಅಂಬರೀಶ ಉಡಚಣ ಸದಸ್ಯರು ಗ್ರಾಮಪಂಚಾಯತ ಫರಹಾತಬಾದ, ಪೋಷಕರ ಗುಂಪಿನ ಸರ್ವ ಸದಸ್ಯರು ಅಧ್ಯಕ್ಷರಾದ ಶ್ರೀಮತಿ ಗೌಸಿಯ ಶಾಹ, ಶ್ರೀಮತಿ ಸವಿತಾ VRW, ಶ್ರೀಮತಿ ಶ್ವೇತಾ ವ್ಯವಸ್ಥಾಪಕರು ಹಾಗೂ ಸೇವಸಂಗಮ ಸಂಸ್ಥೆಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



## “ಆರೈಕೆದಾರರ ಹೋಬಳಿ ಮಟ್ಟದ ಮಾಸಿಕ ಸಭೆ”



ಮಾರ್ಚ್ 19 ರಂದು ಕಲಬುರಗಿ ತಾಲ್ಲೂಕಿನಲ್ಲಿ ಬರುವ ಫರಹತಬಾದ ಚೇತನ ಕೇಂದ್ರದಲ್ಲಿ ಪೋಷಕರ ಸಭೆಯನ್ನು ಹೋಬಳಿ ಮಟ್ಟದ ಸಭೆಯನ್ನು ಹಮ್ಮಿಕೊಳ್ಳಲಾಯಿತು. ಸಭೆಯಲ್ಲಿ ಶ್ರೀಮತಿ ಶ್ವೇತಾ ವ್ಯವಸ್ಥಾಪಕರು ಮಾತನಾಡಿ ಬೆಳವಣಿಗೆಯಲ್ಲಿ ಕುಂಠಿತ ವಿರುವ ನಿಮ್ಮ ಮಕ್ಕಳ ಅಭಿವೃದ್ಧಿಗಾಗಿ ಮತ್ತು ಸರಕಾರದಿಂದ ದೊರೆಯುವ ಸೌಲಭ್ಯಗಳನ್ನು ನೇರವಾಗಿ ಮಗುವಿಗೆ ದೊರೆಯುವಂತೆ ಮಾಡಲು ಹಾಗೂ ಅವರ ಹಕ್ಕುಗಳ ರಕ್ಷಣೆಗಾಗಿ ಇಂತಹ ಪೋಷಕರ ಸಭೆಗಳನ್ನೂ ರಚಿಸಲಾಗಿದೆ ಎಂದು ಹೇಳಿದರು. ಈ ಸಭೆಯಲ್ಲಿ ಗ್ರಾಮಪಂಚಾಯತನಲ್ಲಿ ಮೀಸಲಿಟ್ಟಿರುವ ಐದು ಪ್ರತಿಶತ ಅನುದಾನವನ್ನು ಕುರಿತು ಚರ್ಚಿಸುವ ಮೂಲಕ ಈ ಅನುದಾನವನ್ನು ನಮ್ಮ ಮಕ್ಕಳ ಅಭಿವೃದ್ಧಿಗಾಗಿ ನೀಡಬೇಕೆಂದು ಒತ್ತಾಯಿಸಿ ಗ್ರಾಮಪಂಚಾಯತ ಅಭಿವೃದ್ಧಿ ಅಧಿಕಾರಿಗಳಿಗೆ ಪೋಷಕರ ಗುಂಪಿನ ಮೂಲಕ ಮನವಿ ಪತ್ರವನ್ನು ಸಲ್ಲಿಸಬೇಕು ಎಂದು ನಿರ್ಧರಿಸಲಾಯಿತು. ಈ ಸಭೆಯಲ್ಲಿ ಹಾಗರಗುಂಡಗಿ Parents Champion Group, ಫಾರಹತಾಬಾದ Parents Champion Group ಹಾಗೂ ಹೊನ್ನಕಿರಣಗಿ Parents Champion Group ಸರ್ವ ಸದಸ್ಯರು ಪಾಲ್ಗೊಂಡಿದ್ದರು.

## “ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳ ಗುರುತಿಸುವ” ಕುರಿತು ಒಂದು ದಿನದ ತರಬೇತಿ ಕಾರ್ಯಗಾರ”



25.03.2025 ರಂದು ಆಳಂದ ತಾಲ್ಲೂಕಿನ ತಾಲ್ಲೂಕ ಪಂಚಾಯತ ಭಾಂಗಣದಲ್ಲಿ (ಸಾಮಾರ್ಥ್ಯ ಸೌಧ) ಸೇವಾಸಂಗಮ ಸಂಸ್ಥೆ, ಕಲಬುರಗಿ ವತಿಯಿಂದ ಆಳಂದ ನಗರ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಅಂಗನವಾಡಿ ಕಾರ್ಯಕರ್ತೆಯರಿಗೆ "ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ" ಕಾರ್ಯಕ್ರಮದ ಅಡಿಯಲ್ಲಿ ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳನ್ನು ಗುರುತಿಸುವ ಕುರಿತು ಒಂದು ದಿನದ ತರಬೇತಿ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಆಳಂದ ಹಾಗೂ ತಾಲ್ಲೂಕ ಪಂಚಾಯತ ಇವರ ಸಹಕಾರದಲ್ಲಿ ಆಯೋಜಿಸಲಾಗಿದ್ದು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಾದ ಶ್ರೀ ಶ್ರೀಕಾಂತ ಮೆಂಗಜಿ ಇವರು ಮಕ್ಕಳ ಅಭಿವೃದ್ಧಿಯಲ್ಲಿ ಮಕ್ಕಳ ಬೆಳವಣಿಗೆಯ ಹಂತಗಳ ಕುರಿತು ಮಾಹಿತಿಯನ್ನು ನೀಡುವ ಸಂಬಂಧ ಸೇವಾಸಂಗಮ ಸಂಸ್ಥೆ ವತಿಯಿಂದ ಎಲ್ಲಾ ಅಂಗನವಾಡಿ ಕಾರ್ಯಕರ್ತೆಯರಿಗೆ ಈ ತರಬೇತಿಯನ್ನು ಆಯೋಜಿಸಲಾಗಿದೆ ಆದ್ದರಿಂದ ಇದರ ಸದುಪಯೋಗವನ್ನು ತಾವೆಲ್ಲರೂ ಪಡೆದುಕೊಳ್ಳಬೇಕು ಎಂದು ಹೇಳಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಶ್ರೀ ವಿಶ್ವನಾಥ ಸಹಾಯಕ ನಿರ್ದೇಶಕರು ತಾಲ್ಲೂಕ ಪಂಚಾಯತ ಆಳಂದ ಇವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ ಮಕ್ಕಳ ಬೆಳವಣಿಗೆಯಲ್ಲಿ ಕುಂಠಿತಗೊಂಡು ಅದು ಮುಂದೆ ಮಗುವಿಗೆ ನ್ಯೂನತೆಯಾಗಿ ಆ ಮಗು ಅಂಗವಿಕಲತೆಗೆ ಒಳಗಾಗುವುದನ್ನು ತಪ್ಪಿಸಲು ಅಥವಾ ಅಂಗವಿಕಲತೆಗೆ ಒಳಪಟ್ಟಲ್ಲಿ ಸ್ವಾವಲಂಬನೆಯ ಜೀವನವನ್ನು ಹೇಗೆ ನಡೆಸಲು ಸಹಕಾರಿಯಾಗುವಂತೆ ಶೀಘ್ರ ಪತ್ತೆ ಹಚ್ಚುವ ಪ್ರಯತ್ನವೆ ಈ ತರಬೇತಿಯ ಮುಖ್ಯ ಉದ್ದೇಶವಾಗಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಫಾದರ್ ದೀಪಕ ಸಹ ನಿರ್ದೇಶಕರು ಸೇವಾಸಂಗಮ ಸಂಸ್ಥೆ, ಕಲಬುರಗಿ ಇವರು ಪ್ರಾಸ್ತಾವಿಕ ನುಡಿಗಳನ್ನು ಮಾತನಾಡಿದರು. ಕಾರ್ಯಕ್ರಮದ ವೇದಿಕೆಯಲ್ಲಿ ಅಂಗನವಾಡಿ ಕೇಂದ್ರಗಳ ಮೇಲ್ವಿಚಾರಕಿಯಾದ ಶ್ರೀಮತಿ ಮಹಾದೇವಿಯವರು, ಸಿಸ್ಟರ್ ರೋಜ್ಲಿನ್ ಹಾಗೂ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಸದಾನಂದ ರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ತರಬೇತಿಯಲ್ಲಿ ಕಾರ್ಯಗಾರದಲ್ಲಿ ಆಳಂದ ನಗರ ಪ್ರದೇಶದ 40 ಜನ ಅಂಗನವಾಡಿ ಕಾರ್ಯಕರ್ತೆಯರು ಭಾಗವಹಿಸಿದರು. ಕಾರ್ಯಕ್ರಮವನ್ನು ರಾಜಕುಮಾರ್ ನಿರೂಪಿಸಿ ಮಾಲಾಶ್ರೀ ಸ್ವಾಗತಿಸಿ ವಂದಿಸಿದರು.





## “ಪಾಲಕರಿಗೆ ಸಾಮಾರ್ಥ್ಯ ನಿರ್ಮಾಣ ತರಬೇತಿ ಕಾರ್ಯಕ್ರಮ”



19 ಮಾರ್ಚ್ 2025ರಂದು ಕಲಬುರಗಿ ತಾಲ್ಲೂಕಿನ ಫರಹತಬಾದ ಗ್ರಾಮದಲ್ಲಿ ಬರುವ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಚೇತನ ಕೇಂದ್ರದಲ್ಲಿ ಸೇವಾಸಂಗಮ ಸಂಸ್ಥೆ ಕಲಬುರಗಿ ಹಾಗೂ ಅಜೀಂ ಪ್ರೇಮ್ ಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ "ಪಾಲಕರ ಸಾಮರ್ಥ್ಯ ನಿರ್ಮಾಣ ತರಬೇತಿ ಕಾರ್ಯಕ್ರಮವನ್ನು" ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಶ್ರೀಮತಿ ಶಿವಕಾಂತ ಮತ್ತು ಕುಮಾರಿ ಅನಿತಾ ಇವರು ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳ ಪಾಲಕರಿಗೆ ವಿಶೇಷವಾಗಿ ಸಿ.ಪಿ ಸ್ವೀಚ್, ಮಕ್ಕಳಿಗೆ ಮನೆಯಲ್ಲಿರುವ ಸಾಮಗ್ರಿಗಳ ಸಹಾಯದಿಂದ ಮಾಡಿಸುವ ಚಟುವಟಿಕೆಗಳ ಕುರಿತು ಮಾಹಿತಿಯನ್ನು ನೀಡಿದರು. ಕಾರ್ಯಕ್ರದಲ್ಲಿ ಒಟ್ಟು ಮಕ್ಕಳು ಪಾಲಕರು ಸೇರಿ 35 ಜನರು ಭಾಗವಹಿಸಿದರು.

## "ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ"



ಸೇವಾಸಂಗಮ ಸಂಸ್ಥೆ ಕಲಬುರಗಿ ಇವರ ವತಿಯಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಮಾರ್ಚ್ 25 2025ರಂದು ತಾಲ್ಲೂಕ ಪಂಚಾಯತ ಸಾಮಾರ್ಥ್ಯ ಸೌಧ ಆಳಂದನಲ್ಲಿ ಆಯೋಜಿಸಲಾಗಿತ್ತು. ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಸಿಸ್ಟರ್ ರೋಜ್ಲಿನ್ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಮುಖ ಉದ್ದೇಶ ಮಹಿಳೆಯರ ಅಭಿವೃದ್ಧಿ ಕುರಿತು ಮಹಿಳೆಯರು ಮಾಡಿರುವ ಸಾಧನೆಯನ್ನು ಗುರುತಿಸಿ ಅಂತಹ ಮಹಿಳೆಯರನ್ನು ಗೌರವಿಸಿ ಬೇರೆ ಮಹಿಳೆಯರಿಗೂ ಅವರು ಸ್ಪೂರ್ತಿಯಾಗುವ ರೀತಿಯಲ್ಲಿ ಮಹಿಳೆಯರಲ್ಲಿ ಹುರಿದುಂಬಿಸುವುದಾಗಿರುತ್ತದೆ. ಅಥವಾ ಪ್ರೋತ್ಸಾಹಿಸುವುದಾಗಿರುತ್ತದೆ. ಮಹಿಳೆಯರ ಹಕ್ಕುಗಳ ಕುರಿತು ಜಾಗೃತಿ ಮೂಡಿಸುವುದು ಆಗಿರುತ್ತದೆ. ಈ ಸಂದರ್ಭದಲ್ಲಿ ಮಹಿಳೆಯರು ಮಾಡಿರುವ ಸಾಮಾಜಿಕ, ರಾಜಕೀಯ, ಮತ್ತು ಆರ್ಥಿಕ ಸಾಧನೆಗಳನ್ನು ನೆನೆದು ಗೌರವಿಸುವಂತಹದಾಗಿರುತ್ತದೆ. ವಿಶ್ವದಾದ್ಯಂತ ಅನೇಕ ದೇಶಗಳಲ್ಲಿ "ಅಂತರಾಷ್ಟ್ರೀಯ ಮಹಿಳೆಯರ ದಿನವನ್ನು ಆಚರಿಸುತ್ತಾರೆ. ಇಂದು ಮಹಿಳೆ ಒಂದೇ ಕ್ಷೇತ್ರಕ್ಕೆ ಮೀಸಲಿರದೆ, ರಾಷ್ಟ್ರೀಯ, ಜನಾಂಗೀಯ, ಭಾಷಾವಾರು, ಸಾಂಸ್ಕೃತಿಕ, ಆರ್ಥಿಕ ಅಥವಾ ರಾಜಕೀಯ ಕ್ಷೇತ್ರವಾಗಲಿ, ಎಲ್ಲಾದರಲ್ಲೂ ತಮ್ಮದೇ ಆದ ಛಾಪನ್ನ ಮೂಡಿಸಿದ್ದಾರೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಶಿಶು ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶ್ರೀಕಾಂತ ಮೆಂಗಜಿ, ವಿಶ್ವನಾಥ ಸಹಾಯಕ ನಿರ್ದೇಶಕರು ತಾಲ್ಲೂಕ ಪಂಚಾಯತ ಆಳಂದ, ಫಾದರ ದೀಪಕ ಸಹನಿರ್ದೇಕರು ಸೇವಾಸಂಗಮ ಸಂಸ್ಥೆ ಕಲಬುರಗಿ, ಹಾಗೂ ಶ್ರೀ ಸದಾನಂದ ಉಪಸ್ಥಿತರಿದ್ದರು, ಈ ಕಾರ್ಯಕ್ರಮದಲ್ಲಿ ಶ್ರೀಮತಿ ಮಹಾದೇವಿಯವರ ಸಾಮಾಜಿಕ ಸೇವೆಯನ್ನು ಹಾಗೂ ಅವರ ಸಾಧನೆಯನ್ನು ಗುರುತಿಸಿ ಸೇವಾಸಂಗಮ ಸಂಸ್ಥೆಯ ವತಿಯಿಂದ ಇವರನ್ನು ಸನ್ಮಾನಿಸಿ ಗೌರವಿಸಲಾಯಿತು.



## "ಸುದ್ದಿ ಪತ್ರಿಕೆಯಲ್ಲಿ ಪ್ರಕಟಿಸಲಾದ ಆರ್ಬಿಟ್ ಸಂಸ್ಥೆ ಮತ್ತು ಸೇವಾಸಂಘಮ ಸಂಸ್ಥೆ ಕಾರ್ಯಕ್ರಮಗಳು"



ಮಹಿಳಾ ದಿನಾಚರಣೆ ಕಾರ್ಯಕ್ರಮ । ಡಾ.ರಾಬರ್ಟ್ ಮೈಕಲ್ ಹೇಳಿಕೆ

### ಸದೃಢ ಸಮಾಜಕ್ಕೆ ಮಹಿಳೆ ಪಾತ್ರ ಹಿರಿದು



ಪ್ರಜಾವಾಣಿ

### ಮಹಿಳೆಯರಿಗೆ ಹಕ್ಕು–ಸಮಾನತೆ ಎಂಬುದು ಪ್ರಮುಖ ಆದ್ಯತೆ



ಸಂಯುಕ್ತ ಕರ್ನಾಟಕ

### ಆರ್ಬಿಟ್ ಸಂಸ್ಥೆಯಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ

### 'ಮಹಿಳೆಯರಿಗೆ ಈಗಲೂ ಪೂರ್ಣ ಪ್ರಮಾಣ ಸ್ವತಂತ್ರವಿಲ್ಲ'



### ಮಹಿಳೆಯರಿಗಾಗಿ ಹಕ್ಕು, ಸಮಾನತೆ, ಸಬಲೀಕರಣ ಅತ್ಯಂತ ಪ್ರಮುಖ : ಡಾ ರಾಬರ್ಟ್



### 'ಮಾನಸಿಕ ಅನಾರೋಗ್ಯದಿಂದ ಹೊರಬನ್ನಿ'



### ಎಲ್ಲ ಕ್ಷೇತ್ರಗಳಲ್ಲಿಯೂ ಮಹಿಳೆಯರ ಸಾಧನೆ



### ಮಾನಸಿಕ ಸದೃಢತೆ ಅಗತ್ಯ

# ORBIT NGO

Non-Governmental Organization
Humnabad, Karnataka

Organization of Bidar Integral Transformation

## Scan this QR Code

## TO DONATE

www.orbitbidar.in

# SEVA SANGAMA

Organization for Social Concern Development

## Scan this QR Code

## TO DONATE

www.sevasangama.in

# ಸೇವಾ ಸಂಗಮ ಮತ್ತು ಆರ್ಬಿಟ್ ಸಂಸ್ಥೆ (NGO)
# ಗುಲ್ಬರ್ಗಾ ಧರ್ಮಕ್ಷೇತ್ರ

## Appeal

ಗುಲ್ಬರ್ಗಾ ಧರ್ಮ ಕ್ಷೇತ್ರವು ಉತ್ತರ ಕರ್ನಾಟಕದ ಹಿಂದುಳಿದ ಜಿಲ್ಲೆಗಳಾದ ಬೀದರ್, ಬಿಜಾಪುರ್, ಯಾದಗಿರಿ ಹಾಗೂ ಗುಲ್ಬರ್ಗಾ ಜಿಲ್ಲೆಗಳನ್ನು ಒಳಗೊಂಡಿದೆ. ಗುಲ್ಬರ್ಗಾ ಧರ್ಮಕ್ಷೇತ್ರವು ಉಗಮ ಆಗುವುದಕ್ಕಿಂತ ಮುಂಚೆ ಮಂಗಳೂರು ಧರ್ಮಕ್ಷೇತ್ರದಿಂದ ಗುರುಗಳು ಹಾಗೂ ಕನ್ಯಾ ಭಗಿನಿಯರು ಬೀದರ್ ಜಿಲ್ಲೆಯ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸಿದ್ದಾರೆ. ಆರ್ಬಿಟ್ ಸಮಾಜ ಸೇವಾ ಸಂಸ್ಥೆಯ ಮುಖಾಂತರ 1993 ರಿಂದ ಆರೋಗ್ಯ, ಶಿಕ್ಷಣ, ಮಹಿಳಾ ಸಬಲೀಕರಣ, ಅಂಗವಿಕಲರ ಸಬಲೀಕರಣ ಹಾಗೂ ನಿರ್ಗತಿಕರಿಗೆ ಆಸರೆ ಒದಗಿಸುವ ಕೆಲಸವನ್ನು ಮಾಡಿದ್ದಾರೆ. ಹಾಗೆ 2005ನೇ ಇಸವಿಯಲ್ಲಿ ಗುಲ್ಬರ್ಗಾ ಧರ್ಮಕ್ಷೇತ್ರ ಉಗಮವಾದಾಗಿನಿಂದ ಈ ಸಮಾಜ ಸೇವಾ ಕೆಲಸವನ್ನು ನಾಲ್ಕು ಜಿಲ್ಲೆಗಳಲ್ಲಿ ಕೈಗೊಳ್ಳಲಾಯಿತು. ಸೇವಾ ಸಂಗಮ ಹಾಗೂ ಆರ್ಬಿಟ್ ಸಂಸ್ಥೆಗಳ ಮುಖಾಂತರ ಮಹಿಳಾ ಸಬಲೀಕರಣ, ಮಕ್ಕಳ ಶಿಕ್ಷಣ, ಅಂಗವಿಕಲರ ಕಾರ್ಯಕ್ರಮ, ಪರಿಸರ ಸಂರಕ್ಷಣೆ, ನಿರುದ್ಯೋಗಿಗಳಿಗೆ ಕೌಶಲ್ಯ ತರಬೇತಿ, ಮಾನಸಿಕ ಅಸ್ವಸ್ಥರಿಗೆ ಪುನರ್ವಸತಿ, ಎಂಟು ವರ್ಷಕ್ಕಿಂತ ಕೆಳಗಿನ ಬೆಳವಣಿಗೆಯಲ್ಲಿ ಕುಂಠಿತ ಹೊಂದಿದ ಮಕ್ಕಳಿಗೆ ಚಿಕಿತ್ಸೆ, ನೈಸರ್ಗಿಕ ವಿಪತ್ತು ನಿವಾರಣೆ, ಕ್ಯಾನ್ಸರ್ ಜಾಗೃತಿ ಆಂದೋಲನ, ಹೀಗೆ ಸಮಾಜದಿಂದ ಹಂಚಿಕೆ ತಳ್ಳಲ್ಪಟ್ಟ ಜನರಿಗೆ ಪುರ್ನವಸತಿ ನೀಡುವ ಕೆಲಸವನ್ನು ಈ ಎರಡು ಸಂಸ್ಥೆಗಳು ಮಾಡುತ್ತಿವೆ. ಹಲವಾರು ಕಾರ್ಯಕ್ರಮಗಳ ಮುಖಾಂತರ ನಮ್ಮ ಎರಡು ಸಂಸ್ಥೆಗಳು ಬಡವರಿಗೆ, ನಿರ್ಗತಿಕರಿಗೆ, ಶೋಷಿತರಿಗೆ, ಹಾಗೂ ವಿವಿಧ ಶೋಷಣೆಗಳಿಗೆ ಒಳಗಾದ ಜನರಿಗೆ ಸ್ಪೂರ್ತಿ, ಶಕ್ತಿ, ಹಾಗೂ ಜೀವವನ್ನು ತುಂಬುತ್ತವೆ. ಈ ಸೇವೆಗಳನ್ನು ಹೆಚ್ಚು ಜನರಿಗೆ ತಲುಪಿಸಲು, ನಿಮ್ಮ ಸಹಾಯ ಹಸ್ತವನ್ನು ಹಾಗೂ ನಮ್ಮೊಂದಿಗೆ ಸೇರಿ ಸುಂದರ ಸಮಾಜವನ್ನು ಕಟ್ಟಲು ನಿಮ್ಮ ನೆರವನ್ನು ಅಪೇಕ್ಷಿಸುತ್ತೇವೆ.

ಬನ್ನಿ ಉತ್ತಮ ಸಮಾಜವನ್ನು ಕಟ್ಟೋಣ.



**TO DONATE, SCAN THE QR CODE**

ನಿಮ್ಮ ಸಹಾಯದಿಂದ ಗುಲ್ಬರ್ಗಾ ಹಾಗೂ ಬೀದರ, ಕೋಳಗೇರಿ ನಿವಾಸ ಮಕ್ಕಳು ಉತ್ತಮ ಶಿಕ್ಷಣ ಪಡೆಯುತ್ತಾರೆ.

ನಿಮ್ಮ ಸಹಾಯದಿಂದ ವಿಶೇಷ ಚೇತನ ಮಕ್ಕಳು ತಮ್ಮ ಸಾಮರ್ಥ್ಯ ಹಾಗೂ ಕೌಶಲ್ಯಗಳು ಕಂಡುಕೊಳ್ಳುತ್ತಾರೆ.

ಪ್ರಾಯೋಜಕರು ಒಂದು ಟ್ಯೂಷನ್ ಸೇಂಟರ್ ಪ್ರತಿ ತಿಂಗಳು 4000/- ವರ್ಷಕ್ಕೆ 40,000/-

ಪ್ರಾಯೋಜಕರು ಒಂದು ಮಗು ರೂ.500 ಪ್ರತಿ ತಿಂಗಳು / ವರ್ಷಕ್ಕೆ 6000/-

ನೀವು ಧನ ಸಹಾಯ ಮಾಡಿದ ಮೇಲೆ ನಿಮ್ಮ ವಿಳಾಸ ಮತ್ತು PAN number ಕೆಳಗಿರುವ ಸಂಖ್ಯೆಗೆ WhatsApp ಮಾಡುವುದು.

**(Only for Indian Citizens)**

**Bank Account Details**

Name : Sevasangama Development Society
Account No : 16040100022902
IFSC Code : FDRL0001604
Bank : Federal Bank
Branch : Super Market Kalaburagi

**Fr. Victor Anil Vas**
Director, Seva Sangama & ORBIT


Address

Seva Sangama Development Society, Near Kendriya Vidyalaya, Kotnoor D, Kalaburagi, Karnataka-585102
Contact: 8660968063 / 9743112739 - Email: sevasangama2006@gmail.com / Website: www.sevasangama.in